ಜ್ಯೋತಿಕಾರ್ಯದ ವಾರ್ತಾಪತ್ರ



ಮಹರ್ಷಿ ಅಮರ (1919-1982)

**ಋಷಿಗಳು ಹೇಳಿಕೊಟ್ಟಂತೆ ನಾವು ಧ್ಯಾನವನ್ನು ಕಲಿಸುತ್ತೇವೆ.**

### ಬೆಳಕು

ಈ ಎಲ್ಲ ಸೃಷ್ಟಿಯ ಹಿಂದಿರುವ ಮಹಾನ್ ಶಕ್ತಿ. ಬೆಳಕು ಸಾಕ್ಷಾತ್ ದೇವರು.

### ಜ್ಯೋತಿಕಾರ್ಯ

ಎಲ್ಲ ಜೀವಜಾಲಕ್ಕೆ ತನ್ನ ಅರಿವು ಮತ್ತು ಅನುಭವಗಳ ಮಟ್ಟವನ್ನು ಮೇಲೇರಿಸಿ ಉತ್ತಮವಾಗಿ ಬದುಕಲು ನೆರವಾಗುವುದು.

### ಜ್ಯೋತಿಜೀವಿಗಳು

ಇಲ್ಲಿ ಮತ್ತು ಮೇಲಿನ ಲೋಕಗಳಲ್ಲಿ ಜೀವಿಸುತ್ತ, ಜ್ಞಾನ ಮತ್ತು ಚೈತನ್ಯಗಳ ಬೆಳಕನ್ನು ಸಂಗ್ರಹಿಸಿ ಹರಡುತ್ತಿರುವ ಋಷಿಗಳು.

### ಸಪ್ತಋಷಿಗಳು

ಎಲ್ಲ ಜೀವಜಾಲಕ್ಕೆ ಇಲ್ಲಿ ಶಾಂತಿ ಪರಿಪೂರ್ಣತೆಗಳೊಂದಿಗೆ ಜೀವಿಸುವ ದಾರಿ ತೋರಿಸಿ, ಕೊನೆಗೆ ತಮ್ಮ ಮೂಲವಾದ ಬೆಳಕಿಗೆ ಮಾರ್ಗದರ್ಶಿಸಲು ಆಯ್ಕೆಗೊಂಡಿರುವ ಮಹಾತ್ಮರು.

### ಮಹರ್ಷಿ ಅಮರ

ಸಪ್ತಋಷಿಗಳೊಂದಿಗೆ ನೇರಸಂಪರ್ಕವಿದ್ದ, ಹೊಸ ಯುಗದ ಉನ್ನತಬದುಕಿಗೆ ಅಗತ್ಯವಾದ ಜ್ಞಾನ ಮತ್ತು ಸೂಚನೆಗಳನ್ನು ಕೆಳತಂದ ಒಬ್ಬ ಮಹಾನ್ ಗುರುವಾಗಿದ್ದರು.

### ಗುರೂಜಿ ಕೃಷ್ಣಾನಂದ

ಮಹರ್ಷಿ ಅಮರರ ನೇರ ಶಿಷ್ಯರು. ಅವರು ಋಷಿಗಳ ಮಾರ್ಗವಾದ ಧ್ಯಾನಯೋಗವನ್ನು ಬೆಳೆಸಿ, ತಪೋನಗರದಲ್ಲಿ ಸಪ್ತಋಷಿಗಳ ಆಧ್ಯಾತ್ಮಿಕ ಕೇಂದ್ರವನ್ನು ಸ್ಥಾಪಿಸಿದ್ದಾರೆ.

### ಸಪ್ತಋಷಿ ಧ್ಯಾನಯೋಗ

ಋಷಿಗಳ ಮಾರ್ಗದರ್ಶನದಲ್ಲಿ ರೂಪುಗೊಂಡಿರುವ, ಧ್ಯಾನ ಮತ್ತು ನಮ್ಮ ಭಾವನೆ-ಆಲೋಚನೆಗಳನ್ನು ಉತ್ತಮಗೊಳಿಸಿಕೊಳ್ಳುವ ಮೂಲಕ ನಮ್ಮ ಲೌಕಿಕ ಮತ್ತು ಆಧ್ಯಾತ್ಮಿಕ ಬದುಕುಗಳನ್ನು ಸಮರ್ಪಕವಾಗಿ ಜೀವಿಸಲು ನೆರವಾಗುವ ಒಂದು ವಿನೂತನ ಆಧ್ಯಾತ್ಮಿಕ ಮಾರ್ಗ.

### ಪ್ರಮಾಣಗಳು

- ★ ನಾವೆಲ್ಲರೂ ಒಂದು ಮಹಾ ಜ್ಯೋತಿಯ (ದೇವರ) ಕಣಗಳು.
- ★ ಪ್ರೀತಿ ನಮ್ಮ ಸ್ವಭಾವ.
- ★ ಮೌನ ನಮ್ಮ ಭಾಷೆ.
- ★ ಧ್ಯಾನ ನಮ್ಮ ಮಾರ್ಗ.
- ★ ಈ ಪ್ರಪಂಚ ನಮ್ಮ ಆಶ್ರಮ.
- ★ ಇಡೀ ಸೃಷ್ಟಿಯೇ ನಮ್ಮ ಕುಟುಂಬ.
- ★ ದೇವರು ನಮ್ಮ ಗುರು. ಋಷಿಗಳು ನಮ್ಮ ಮಾರ್ಗದರ್ಶಕರು.


# ತಪೋವಾಣಿ

ಸಂ. 7 ಸಂ. 6 | ಜೂನ್ 2010 | ರೂ.15


## ಅನಿಸಿಕೆಗಳು

**ಗುರೂಜಿ ಕೃಷ್ಣಾನಂದ**

**(ಅನು: ಶ್ಯಾಮಲಾದೇವಿ)**

ನಾನು ದೂರದ ಮೋಡಗಳಾಚೆ ಕುಳಿತು, ನನ್ನ ಭೂಮಿ ಮೌನವಾಗಿ ಚಲಿಸುತ್ತಿರುವುದನ್ನು ಮತ್ತು ನನ್ನ ಜನ ತಮ್ಮದೇ ದಾರಿಗಳು ಮತ್ತು ಬಲೆಗಳಲ್ಲಿ ಸದಾ ಕಾರ್ಯಮಗ್ನರಾಗಿರುವುದನ್ನು ನೋಡಿದಾಗ, ನನ್ನ ಮಾನವ ಭಾವನೆಗಳನ್ನು ವ್ಯಕ್ತಪಡಿಸಲು ಪದಗಳು ಸುಲಭವಾಗಿ ಸಿಗುತ್ತಿಲ್ಲ. ಕಾಲ, ವಿಧಿಗಳು ತಮ್ಮದೇ ಆದ ಕಾರ್ಯಕ್ರಮಗಳನ್ನು ಹೊಂದಿವೆ. ಅವು, ಈಗಿನ ಎಲ್ಲ ಹೋರಾಟಗಳು ಮತ್ತು ಕನಸುಗಳನ್ನು ತನ್ನೊಳಗೆ ಅಡಗಿಸಿಕೊಂಡು, ಕಾಣದ ಮುಂಬರುವ ಕಾಲವನ್ನು ನಿಧಾನವಾಗಿ ಹೊರಗೆಡಹುತ್ತವೆ. ಮುಂಬರುವ ಕಾಲ, ಭಯಾನಕ ಅನುಭವಗಳನ್ನು ಹೊಂದಿರುವಂತೆಯೇ, ರೋಮಾಂಚಕಾರಿ ವಿಸ್ಮಯಗಳನ್ನೂ ಹೊಂದಿದೆ ಎನ್ನುವುದು ನನಗೆ ಗೊತ್ತು. ಕಾಲ, ಅವಕಾಶಗಳ ಅನೇಕ ದೋಣಿಗಳನ್ನು ತಂದಿದೆ ಎನ್ನುವುದೂ ನನಗೆ ಗೊತ್ತು. ಆದರೆ, ನನ್ನ ಜನ ಕತ್ತಲಲ್ಲಿ ತಡಕಾಡುತ್ತಾ ದೋಣಿಗಳನ್ನು ತಪ್ಪಿಸಿಕೊಳ್ಳುತ್ತಾರೆ. ಅನೇಕರು, ಟಾರ್ಚ್‌ಗಳೊಂದಿಗೆ ನೆರವು ನೀಡಲು ಮತ್ತು ಮಾರ್ಗದರ್ಶಿಸಲು ಪ್ರಯತ್ನಿಸುತ್ತಿದ್ದಾರೆ. ಆದರೆ, ಜನ ಈ ಪ್ರೀತಿ ಮತ್ತು ನೆರವಿನ ಹಸ್ತಗಳನ್ನು ಹಿಡಿದುಕೊಳ್ಳುವುದಿಲ್ಲ. ಅವರು ಇವನ್ನು ಕಳೆದುಕೊಳ್ಳುತ್ತಾರೆ ಮತ್ತು ದೂರ ಹೋಗುತ್ತಾರೆ.

ನನ್ನ ಭಾವನೆಗಳನ್ನು ವ್ಯಕ್ತಪಡಿಸಲು ಪದಗಳು ಸುಲಭವಾಗಿ ಸಿಗುತ್ತಿಲ್ಲ.

ಇದು ಅವಕಾಶಗಳ ಕಾಲ. ಅನೇಕ ಅವಕಾಶಗಳ ಕಾಲ. ಹೊಸ ವಾಸ್ತವಗಳಿಗೆ ಎಚ್ಚರಗೊಳ್ಳಲು ಅವಕಾಶಗಳು. ನಮ್ಮ ಅರಿವನ್ನು ವಿಸ್ತರಿಸಲು, ಮತ್ತು ವಿಶ್ವದ ಪ್ರೀತಿ ಮತ್ತು ವಿಶಾಲತೆಗಳನ್ನು ಅನುಭವಿಸಲು ಅವಕಾಶಗಳು. ನಮ್ಮ ಅಜ್ಞಾನದ ಹೊದಿಕೆಗಳನ್ನು ಕಳಚಲು ಮತ್ತು ಬೆಳಕನ್ನು ಆಯ್ಕೆಮಾಡಲು ಅವಕಾಶಗಳು.

ಹಿಂದೆಂದೂ ಇಂತಹ ಅವಕಾಶಗಳು ನಮ್ಮ ಮುಂದೆ ಬಂದಿರಲಿಲ್ಲ. ನಮ್ಮ ಪ್ರೀತಿ ಮತ್ತು ಬೆಳಕುಗಳು ಪ್ರಕಟಗೊಂಡಾಗ, ಈ ಪ್ರಪಂಚ ಮತ್ತು ಜನಗಳ ವಿಧಿಗಳನ್ನು ಬದಲಾಯಿಸುವಂಥ ಅವಕಾಶಗಳು. ಹಾಗೆಯೇ, ಇಷ್ಟೊಂದು ಜವಾಬ್ದಾರಿಗಳನ್ನು ಹಿಂದೆಂದೂ ನಮಗೆ ಕೊಟ್ಟಿರಲಿಲ್ಲ. ಇದಕ್ಕೆ ನಾವು ಹೆಮ್ಮೆಪಡಬೇಕು ಮತ್ತು ಜವಾಬ್ದಾರಿಗಳನ್ನು ತೆಗೆದುಕೊಳ್ಳಬೇಕು. ನಾವು ಈ ಭೂಮಿಯನ್ನು 2012ರ ಭಯಾನಕ ನೆರಳುಗಳಿಂದಾಚೆಗೆ, ಹೊಸಯುಗದ ಬೆಳಕಿಗೆ ಕರೆದೊಯ್ಯುವ ಹೀರೋಗಳಾಗಬೇಕು.

ನಾವು ಈ ಜವಾಬ್ದಾರಿಗಳಿಂದ ಹಿಂದೆಗೆಯದೆ ಇರೋಣ ಮತ್ತು ಈ ಸುವರ್ಣಾವಕಾಶಗಳನ್ನು ಕಳೆದುಕೊಳ್ಳದೆ ಇರೋಣ.

ಯಾವಾಗ ಅವತಾರ ಪುರುಷ ಕಾಣಿಸಿಕೊಳ್ಳುತ್ತಾನೆ? ನಮಗೆ ಗೊತ್ತಿಲ್ಲ. ಆದರೆ ಅವನು ಕಾಣಿಸಿಕೊಂಡಾಗ, ಅದು ಇಡೀ ಪ್ರಪಂಚಕ್ಕೆ ಗೊತ್ತಾಗುತ್ತದೆ ಮತ್ತು ಅವನ ಮಾತುಗಳನ್ನು ಕೇಳಿಸಿಕೊಳ್ಳುತ್ತದೆ. ಪ್ರತಿಯೊಬ್ಬರೂ ಅವನನ್ನು ಕೂಡಲೆ ಅನುಸರಿಸದೆ ಇರಬಹುದು. ಆದರೆ ಪ್ರತಿಯೊಬ್ಬರಿಗೂ ಅವನ ಮಾತು ಕೇಳಿಸುತ್ತದೆ.

ಪ್ರತಿಯೊಬ್ಬರೂ ಅವನನ್ನು ನೋಡುತ್ತಾರೆ ಮತ್ತು ಅವನನ್ನು ಗುರುತಿಸುತ್ತಾರೆ! ಅವನನ್ನು ನೋಡುವುದು ಮತ್ತು ಕೇಳುವುದು ಇದೇನು ಮೊದಲಬಾರಿ ಅಲ್ಲ. ಯುಗಾಂತರಗಳಿಂದ ಅವನು ನಮಗೆ ಗೊತ್ತಿದ್ದಾನೆ.

ಅವನಿಗಾಗಿ ನಾವು ತಾಳ್ಮೆಯಿಂದ ಕಾಯೋಣ. ■


**ಮಾನಸ ಫೌಂಡೇಶನ್ (ರಿ)**

ತಪೋನಗರ, ಚಿಕ್ಕಗುಬ್ಬಿ, (ಹೆಣ್ಣೂರು-ಬಾಗಲೂರು ರೋಡ್) ಬೆಂಗಳೂರು ಅರ್ಬನ್ 560 077. ಭಾರತ.

✆ (080) 2846 5280, 2271 5501, 93420 30250 (ಬೆಳಗ್ಗೆ 10ರಿಂದ ಮಧ್ಯಾಹ್ನ 1)

ಇ-ಮೇಲ್: info@lightagemasters.com ವೆಬ್-ಸೈಟ್: www.lightagemasters.com

## ಧ್ಯಾನದ ತರಗತಿಗಳು

### ತಪೋನಗರದಲ್ಲಿ

**ಭಾನುವಾರ** (ಬೆಳಿಗ್ಗೆ 10 ರಿಂದ 11 ಘಂ.)

### ಬೆಂಗಳೂರು ನಗರದಲ್ಲಿ

**ಭಾನುವಾರ** (ಬೆಳಿಗ್ಗೆ 7 ರಿಂದ 8 ಘಂ.)
ಆಂಜನೇಯ ದೇವಸ್ಥಾನ,
ಮಹಾಲಕ್ಷ್ಮೀ ಲೇಔಟ್

**ಸೋಮವಾರ** (ಸಂಜೆ 7 ರಿಂದ 8 ಘಂ.)
ಆಂಜನೇಯ ದೇವಸ್ಥಾನ,
ಮಹಾಲಕ್ಷ್ಮೀ ಲೇಔಟ್

**ಮಂಗಳವಾರ** (ಸಂಜೆ 7 ರಿಂದ 8 ಘಂ.)
ಶ್ರೀ ಅರಬಿಂದೊ ಕಾಂಪ್ಲೆಕ್ಸ್, 1ನೇ ಫೇಸ್,
ಜೆ.ಪಿ. ನಗರ

**ಬುಧವಾರ** (ಸಂಜೆ 7 ರಿಂದ 8 ಘಂ.)
ಆರ್ಯ ಸಮಾಜ, ಸಿ.ಎಂ.ಹೆಚ್. ರೋಡ್,
ಇಂದಿರಾನಗರ
ಹಿಮಾಂಶು, 4ನೆಯ ಮೇನ್, ಮಲ್ಲೇಶ್ವರಂ
ಮಾರುತಿ ಮಂದಿರ, ವಿಜಯನಗರ

**ಗುರುವಾರ** (ಸಂಜೆ 7 ರಿಂದ 8 ಘಂ.)
ದೇವಗಿರಿ ವೆಂಕಟೇಶ್ವರ ದೇವಸ್ಥಾನ
ಬನಶಂಕರಿ 2ನೆಯ ಸ್ಟೇಜ್

**ಶುಕ್ರವಾರ** (ಸಂಜೆ 7 ರಿಂದ 8 ಘಂ.)
ಇಂಡಿಯನ್ ಹೆರಿಟೇಜ್ ಅಕಾಡೆಮಿ
6ನೆಯ ಬ್ಲಾಕ್, ಕೋರಮಂಗಲ

**ಶನಿವಾರ** (ಸಂಜೆ 7 ರಿಂದ 8 ಘಂ.)
ಹಿಮಾಂಶು, 4ನೇ ಮುಖ್ಯರಸ್ತೆ,
ಮಲ್ಲೇಶ್ವರಂ

### ಆನೇಕಲ್‌ನಲ್ಲಿ (ರಾಜರಾಜೇಶ್ವರಿ ಬಡಾವಣೆ)

**ಸೋಮವಾರ** (ಸಾಯಂಕಾಲ 6 ರಿಂದ 7 ಘಂ.)
**ಮಂಗಳವಾರ** (ಬೆಳಿಗ್ಗೆ 6 ರಿಂದ 7 ಘಂ.)

ಹೊರಗಿನ ಸಾಧಕರಿಗೆ ಅಂಚೆ ಮತ್ತು ಇ-ಮೇಲ್‌ಗಳ ಮೂಲಕ ಧ್ಯಾನದ ತರಗತಿಗಳು ಲಭ್ಯವಿವೆ. ಹೆಚ್ಚು ಮಾಹಿತಿಗಾಗಿ ಆರನೇ ಪುಟದ ಮೊದಲನೇ ಕಾಲಂ ನೋಡಿ.

**ಡೋರ್‌ವೇಸ್ (ಇಂಗ್ಲಿಷ್)/ತಪೋವಾಣಿ (ಕನ್ನಡ) ಪ್ರಕಾಶ್‌ಮಾರ್ಗ್ (ಮರಾಠಿ) ವಾರ್ತಾಪತ್ರದ ವಾರ್ಷಿಕ ಚಂದಾ ರೂ.200/- ಮನಿಯಾರ್ಡರ್‌ಗಳನ್ನು ಸ್ವೀಕರಿಸುವುದಿಲ್ಲ.**

### ಮಾಸ ಪತ್ರಿಕೆ

ನಿಮ್ಮ ಸ್ನೇಹಿತರಿಗೆ ತಪೋವಾಣಿಯನ್ನು ಉಡುಗೊರೆಯಾಗಿ ಕೊಡಿ. ವಾರ್ಷಿಕ ಚಂದಾ ದೊಂದಿಗೆ ಅವರ ಹೆಸರು ಮತ್ತು ವಿಳಾಸವನ್ನು ನಮಗೆ ಕಳುಹಿಸಿ.



**18 ಮೇ 2010 – ಆನೇಕಲ್‌ನಲ್ಲಿ ಗುರೂಜಿಯವರ ಹುಟ್ಟುಹಬ್ಬದ ಸಮಾರಂಭ**

### ಸುದ್ದಿ-ಸೂಚನೆ

- ಎಲ್ಲಾ ಸಾಧಕರು, ಸೂಚಿಸಿದ ಸಮಯದಲ್ಲಿ ತಮ್ಮ ಧ್ಯಾನ-ಅಭ್ಯಾಸವನ್ನು ಪರೀಕ್ಷಿಸಿಕೊಳ್ಳಬೇಕು. ಚೆಕಪ್‌ಗೆ ಆ ಸಮಯದಲ್ಲಿ ಬರದಿದ್ದರೆ ಅವರನ್ನು ನಮ್ಮ ಸಾಧಕರಲ್ಲ ಎಂದು ಪರಿಗಣಿಸಲಾಗುವುದು.
- 23-05-2010ರಂದು ಗುರೂಜಿಯವರ ಜನ್ಮದಿನಾಚರಣೆಯ ಸಂದರ್ಭದಲ್ಲಿ ನಮ್ಮ ಹೊಸ ಪ್ರಕಟಣೆಗಳಾದ "Guruji Speaks Vol - 3" ಮತ್ತು "Channelled Knowledge from the Rishis Vol-2" ಗಳನ್ನು ಬಿಡುಗಡೆ ಮಾಡಲಾಯಿತು.
- 26-06-2010 ರಂದು ಚಂದ್ರಗ್ರಹಣ ಸಮಯದಲ್ಲಿ ಸಾಮೂಹಿಕ ಧ್ಯಾನವನ್ನು ತಪೋನಗರದಲ್ಲಿ ಆಯೋಜಿಸಲಾಗಿದೆ.
- ಇನ್ನು ಮುಂದೆ ದೂರಕಲಿಕೆಗೆ ರಿಜಿಸ್ಟ್ರೇಶನ್ ಮಾಡಲು ಡಿಡಿಗಳನ್ನು "Manasa Light Age Foundation®" ಹೆಸರಿನಲ್ಲಿ ಕಳುಹಿಸಬೇಕು.

### ಭಾನುವಾರದ ಪ್ರಸಾದವನ್ನು ಪ್ರಾಯೋಜಿಸಿದವರು

| | |
|---|---|
| 04-4-10 | ಸೀಮಾ ಅಜಯ್, ಬ್ರಜಬಂಧು ಮಿಶ್ರಾ ಮತ್ತು ಆಶಿಶ್ ಪಾಟೀಲ್ |
| 11-4-10 | ಸುಧಾಕರ್ ರಾವ್. ಪಿ. |
| 18-4-10 | ನಳಿನಿ ರಾಜಶೇಖರ್ ಮತ್ತು ಉಪಾಸನಾ ಗುರ್ಜರ್ |
| 25-4-10 | ಚಂದ್ರಸಖಿ |

ಈ ತಿಂಗಳ ವಾರ್ತಾಪತ್ರಗಳನ್ನು ಪ್ರಾಯೋಜಿಸಿದವರು ಶ್ರೀ ಭುವನೇಶ್ವರ್ ದಿವೇಕರ್

"ತಪೋವಾಣಿ"ಯ ಮುದ್ರಣಕ್ಕೆ ರೂ. 5000 ಮತ್ತು ಭಾನುವಾರದ ಪ್ರಸಾದವನ್ನು ಪ್ರಾಯೋಜಿಸುವುದಕ್ಕೆ ರೂ. 2000.

### ಈ ತಿಂಗಳು ತಪೋನಗರದಲ್ಲಿ

| | |
|---|---|
| ಭಾನುವಾರಗಳು | ಉಪನ್ಯಾಸಗಳು<br>ಬೆಳಿಗ್ಗೆ 11 ರಿಂದ 12ರವರೆಗೆ<br>ವಿಶೇಷ ಧ್ಯಾನ<br>ಮಧ್ಯಾಹ್ನ 12 ರಿಂದ 1ರವರೆಗೆ |
| ಶುಕ್ರವಾರಗಳು | ಲೈಟ್ ಚಾನಲ್<br>ಬೆಳಿಗ್ಗೆ 10 ರಿಂದ 1 ರವರೆಗೆ |
| 26 ಶನಿವಾರ | ಚಂದ್ರಗ್ರಹಣ ವಿಶೇಷ ಧ್ಯಾನ<br>ಮಧ್ಯಾಹ್ನ 2.25 ರಿಂದ 7.51ರವರೆಗೆ |

### ಧ್ಯಾನಕ್ಕೆ ವಿಶೇಷ ದಿನಗಳು

| | | |
|---|---|---|
| 05 | ಶನಿ | ಕೃಷ್ಣಾಷ್ಟಮಿ |
| 10 | ಗುರು | ಮಾಸ ಶಿವರಾತ್ರಿ |
| 12 | ಶನಿ | ಅಮಾವಾಸ್ಯೆ |
| 19 | ಶನಿ | ಶುಕ್ಲ ಅಷ್ಟಮಿ |
| 21 | ಸೋಮ | ಶುಕ್ಲ ದಶಮಿ |
| 26 | ಶನಿ | ಪೂರ್ಣಿಮಾ ಚಂದ್ರಗ್ರಹಣ |

### ಆನೇಕಲ್ ಕೇಂದ್ರದಲ್ಲಿ

- 12-4-2010 ರಂದು ನಮ್ಮ ಸಪ್ತರ್ಷಿ ಧ್ಯಾನಕೇಂದ್ರದ ದ್ವಿತೀಯ ವಾರ್ಷಿಕೋತ್ಸವವನ್ನು ಆಚರಿಸಲಾಯಿತು.
- 18-5-2010 ರಂದು ಬೆಳಿಗ್ಗೆ 11.30 ಗಂಟೆಗೆ ಗುರೂಜಿಯವರ ಜನ್ಮದಿನವನ್ನು ಆಚರಿಸಲಾಯಿತು.

**ಗುರೂಜಿಯವರ ಭಾನುವಾರದ ಉಪನ್ಯಾಸಗಳ ನೇರ ಪ್ರಸಾರವು ವೆಬ್‌ನಲ್ಲಿ ಮೆಂಬರ್‌ಗಳಿಗೆ ಲಭ್ಯವಿದೆ. ಇದರ ಮಾಹಿತಿಗಾಗಿ ಇಮೇಲ್ ಮುಖಾಂತರ ಸಂಪರ್ಕಿಸಬಹುದು.**

**12-06-2010 ರಂದು ಬೆಳಿಗ್ಗೆ 11 ರಿಂದ ಮಧ್ಯಾಹ್ನ 1ರವರೆಗೆ ಗುರೂಜಿಯವರೊಂದಿಗೆ 'ಅನೌಪಚಾರಿಕ ಸಭೆ' ಇರುತ್ತದೆ. ಭಾಗವಹಿಸಲು ಆಸಕ್ತಿ ಇರುವವರು ತಮ್ಮ ಹೆಸರನ್ನು ಆಫೀಸಿನಲ್ಲಿ ರಿಜಿಸ್ಟರ್ ಮಾಡಬೇಕು.**

## ಲೈಟ್ ಚಾನಲ್ ವಿಶ್ವಸಂಚಲನದ ಇತ್ತೀಚಿನ-ಸುದ್ದಿ

- 2010ರ ಏಪ್ರಿಲ್ ತಿಂಗಳಲ್ಲಿ 18,000ಕ್ಕೂ ಹೆಚ್ಚು ವಿದ್ಯಾರ್ಥಿಗಳು ಬೆಳಕನ್ನು ಚಾನಲ್ ಮಾಡಿದರು.
- 2010 ಫೆಬ್ರವರಿ 1ರಿಂದ ಈವರೆಗೆ 80,000ಕ್ಕೂ ಹೆಚ್ಚು ವಿದ್ಯಾರ್ಥಿಗಳು ಈ ಭೂಮಿಗೆ ಹೆಚ್ಚು ಬೆಳಕು ತರುವುದಕ್ಕಾಗಿ ಬೆಳಕನ್ನು ಚಾನಲ್ ಮಾಡಿದರು.
- 2010ರ ಏಪ್ರಿಲ್ 30ರಂದು ದಕ್ಷಿಣ ಆಫ್ರಿಕಾದ ಕೇಪ್‌ಟೌನ್‌ನಲ್ಲಿ ಹಲವು ಜನ ಜೆನಿಫರ್ ಡಯಾನೆಜ್ ಅವರ ನೇತೃತ್ವದಲ್ಲಿ ಬೆಳಕನ್ನು ಚಾನಲ್ ಮಾಡಿದರು. ■

## ಲೈಟ್ ಚಾನಲಿಂಗ್ ಸೆಷನ್‌ಗಳು



ಲೈಟ್ ಚಾನಲಿಂಗ್ ಸೆಷನ್‌ನ ನಂತರ, ಕೇಪ್‌ಟೌನ್, ದಕ್ಷಿಣ ಆಫ್ರಿಕಾ



ಕೇಂದ್ರೀಯ ವಿದ್ಯಾಲಯ, ಚೆನ್ನೈ

## ತಪೋನಗರ ಡೈರಿ

ಸಂ: ಶೀಮಾ ಅಲ್‌ವೇಲ್; ಅನು: ವರ್ಷಾ ಗುರ್ಜರ್

ಏಪ್ರಿಲ್ ತಿಂಗಳು ಗುಡ್‌ಫ್ರೈಡೆಯ ಧ್ಯಾನದೊಂದಿಗೆ ಆರಂಭವಾಯಿತು. ಧ್ಯಾನಿಗಳೆಲ್ಲಾ ಏಸುಕ್ರಿಸ್ತನ ಚೈತನ್ಯಗಳನ್ನು ಪಡೆದರು. ಆಗಿನಿಂದ ಹಲವರು, ತಾವು ಏಸುಕ್ರಿಸ್ತನ ಬಗ್ಗೆ ಪುಸ್ತಕಗಳನ್ನು ಓದುತ್ತಿರುವುದನ್ನು ಮತ್ತು ಚಲನಚಿತ್ರಗಳನ್ನು ನೋಡುತ್ತಿರುವುದನ್ನು ಗಮನಿಸಿದರು. ಇದು ಆಕಸ್ಮಿಕವೇ? ಅಲ್ಲ. ಕಳೆದ ಕೆಲವು ದಿನಗಳಿಂದ ಏಸುಕ್ರಿಸ್ತನ ಚೈತನ್ಯಗಳು ಹೆಚ್ಚಾಗಿರುವುದನ್ನು ಗುರೂಜಿಯವರು ನಂತರ ತಿಳಿಸಿದರು.

ಆನೇಕಲ್‌ನಲ್ಲಿರುವ ನಮ್ಮ ಸಪ್ತರ್ಷಿ ಧ್ಯಾನಕೇಂದ್ರದಲ್ಲಿ ದ್ವಿತೀಯ ವಾರ್ಷಿಕೋತ್ಸವವನ್ನು ಆಚರಿಸಲಾಯಿತು. ಈ ತಿಂಗಳಲ್ಲಿ ಬೆಂಗಳೂರು ಬಲವಾದ ಮಳೆಯನ್ನು ಕಂಡಿತು. ಅದು ಕಠೋರವಾದ ಬಿಸಿಲಿನಿಂದ ನೆಮ್ಮದಿಯನ್ನು ತಂದರೂ, ಜನಜೀವನವನ್ನು ಅಸ್ತವ್ಯಸ್ತಗೊಳಿಸಿತು. ತಪೋನಗರವೂ ಇದಕ್ಕೆ ಹೊರತಾಗಿರಲಿಲ್ಲ. ಅನೇಕ ವಿದ್ಯುತ್ ಕಂಬಗಳು ಮತ್ತು ಮರಗಳು ತಲೆಕೆಳಗಾಗಿ, ವಿದ್ಯುತ್ ಸರಬರಾಜಿನಲ್ಲಿ ಅಡಚಣೆಯಾಯಿತು. ಅಂತರ್‌ಮಾನಸದ ಅನೇಕ ವಿದ್ಯುತ್ ಉಪಕರಣಗಳು ಹಾನಿಗೊಳಗಾದವು. ಇಷ್ಟೆಲ್ಲ ಆದರೂ ಜೀವನ ಎಂದಿನಂತೆ ಸಾಗುತ್ತಿದೆ.

ಏಪ್ರಿಲ್ 22ರಂದು ಓರಿಯಂಟೇಶನ್ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು. ಅದರ ಹಿಂದಿನ ಸಂಜೆ, ಇಂಟರ್‌ನೆಟ್ ರೂಟರ್ ಬಳಿ ಇರುವ ಗೋಪುರಕ್ಕೆ ಸಿಡಿಲು ಬಡಿಯಿತು. ಇದರಿಂದಾಗಿ ಸಂಪೂರ್ಣ ವೆಬ್‌ಕಾಸ್ಟ್ ಯೋಜನೆ ಇಕ್ಕಟ್ಟಿಗೆ ಸಿಲುಕಿತ್ತು. ತಕ್ಷಣ ಸ್ಥಳೀಯ ವಾಲಂಟಿಯರ್‌ಗಳು ತುರ್ತುವ್ಯವಸ್ಥೆ ಮಾಡಿದರು. ಮರುದಿನ ಮುಂಜಾನೆಯೇ ಈ ಉಪಕರಣಗಳನ್ನು ನೋಡಿಕೊಳ್ಳುವ ಟೀಮ್-ಅನ್ನು ಕರೆಯಿಸಲಾಯಿತು. ಇಷ್ಟೆಲ್ಲಾ ಅಡಚಣೆಗಳ ನಡುವೆಯೂ ಈ ಕಾರ್ಯಕ್ರಮ ಯಶಸ್ವಿಯಾಗಿ ನಡೆಯಿತು.

ನಗರದ ಹೊರಗಿರುವ ಅನೇಕ ಸಾಧಕರು ಈ ವೆಬ್‌ಕಾಸ್ಟ್ ಸೌಲಭ್ಯವನ್ನು ಪಡೆದರು ಮತ್ತು ಈ ಮೂಲಕ ಮೊತ್ತಮೊದಲ ಬಾರಿಗೆ ಓರಿಯಂಟೇಶನ್ ಕಾರ್ಯಕ್ರಮವು ಹೆಚ್ಚು ಸಾಧಕರಿಗೆ ಹರಡಿತು. ■

## ಲೈಟ್ ಚಾನಲ್ಸ್
### ವಿಶ್ವ ಸಂಚಲನ

ಇದೊಂದು ಆತ್ಮಪ್ರಜ್ಞೆಯಲ್ಲಿ ನಡೆಯುವ ಸಂಚಲನ. ಈ ಪ್ರಪಂಚವನ್ನು ಬೆಳಕು, ಶಾಂತಿ ತುಂಬಿರುವ ಒಂದು ಸುಂದರ ಪ್ರದೇಶವನ್ನಾಗಿ ಮಾಡುವ ಸಂಚಲನ. ಇಲ್ಲಿ ಭಾಷಣಗಳು, ಬಾವುಟಗಳಿಲ್ಲ. ಇಲ್ಲಿ ಬೆಳಕನ್ನು ಮೇಲಿನಿಂದ ತಂದು ಸುತ್ತಲೂ ಹರಡಿದರೆ ಅಷ್ಟೇ ಸಾಕು. ಉಳಿದ ಎಲ್ಲ ಕೆಲಸವನ್ನೂ ಬೆಳಕೇ ಮಾಡುತ್ತದೆ.

ನಾವು ಬೆಳಕನ್ನು ತಂದು ಹರಡಿದಾಗ, ಅದು ಬೇರೆಯವರ ಹೃದಯಗಳು ಮನೆಗಳನ್ನು ತುಂಬಿ, ಅವರ ಭಾವನೆ-ವಿಚಾರಗಳಲ್ಲಿರುವ ಕತ್ತಲನ್ನು ಬೆಳಕನ್ನಾಗಿ ಪರಿವರ್ತಿಸುತ್ತದೆ. ಆಗ ವ್ಯಕ್ತಿಗಳಲ್ಲಿ ಪರಿವರ್ತನೆ ಯುಂಟಾಗುತ್ತದೆ. ವ್ಯಕ್ತಿಗಳಿಂದ ಪ್ರಪಂಚ ಪರಿವರ್ತಿತವಾಗುತ್ತದೆ. ಪ್ರಪಂಚದಲ್ಲಿ ಬೆಳಕು ತುಂಬುತ್ತದೆ.

ಈ ಬೆಳಕು ಸಾಧಾರಣ ಬೆಳಕಲ್ಲ. ಯಾವ ಬೆಳಕಿನಿಂದ ಇಡೀ ಸೃಷ್ಟಿ ಬಂದಿದೆಯೋ ಆ ಮೂಲ ಬೆಳಕು. ಈ ಬೆಳಕಿನಲ್ಲಿ ಎಲ್ಲಾ ಇದೆ – ಶಕ್ತಿ, ವಿವೇಕ ಮತ್ತು ಭವಿಷ್ಯ. ಈ ಬೆಳಕು ಕಾಣುವುದಿಲ್ಲ. ಆದರೆ ಎಲ್ಲಾ ಕಡೆ ಇದೆ.

**ನಾವು ಪ್ರತಿದಿನ ಏಳುವಾಗ ಮತ್ತು ಮಲಗುವಾಗ 7 ನಿಮಿಷಗಳ ಕಾಲ ಈ ಬೆಳಕನ್ನು ತಂದು ಹರಡೋಣ. ಹರಡಿ ಪ್ರಪಂಚದಲ್ಲಿ ಪರಿವರ್ತನೆಯನ್ನು ತರೋಣ.**

ಈ ಸಂಚಲನವನ್ನು 18-5-2008 ರಂದು, ಗುರೂಜಿ ಕೃಷ್ಣಾನಂದರ ಮೂಲಕ, ಸಪ್ತಋಷಿಗಳು ಪ್ರಾರಂಭಿಸಿದರು.

ಈ ಸಂದೇಶವನ್ನು ಬೇರೆಯವರಿಗೆ ಹರಡಿ. ಈ ಸಂಚಲನವನ್ನು ಬೆಳೆಸಿ. ನಮ್ಮ ವೆಬ್‌ಸೈಟ್ www.lightchannels.comಗೆ ಬನ್ನಿ.

## ಶಂಬಲದ ತತ್ವಗಳು

**ಶಂಬಲದ ಈ ಏಳು ತತ್ವಗಳನ್ನು ಪುರಾತನ ಋಷಿಗಳು ಕೊಟ್ಟಿದ್ದಾರೆ. ಇವುಗಳನ್ನು ಜೀವನದಲ್ಲಿ ಅಳವಡಿಸಿಕೊಂಡು ಶಂಬಲದಲ್ಲಿ ವಾಸಿಸುತ್ತಿರುವ ಜನ ಶಾಂತಿ-ಪೂರ್ಣತೆಗಳಿಂದ, ವೃದ್ಧಾಪ್ಯ ಬಾರದೆ ಯಾವಾಗಲೂ ಯೌವ್ವನದಲ್ಲಿಯೇ, ಬದುಕಿದ್ದಾರೆ.**

1. ನಮ್ಮೊಳಗಿರುವ ಬೆಳಕನ್ನು ಅನುಭವಿಸಿ, ಹೊರಗೆ ತಂದು ಹರಡುವುದು.
2. ಪ್ರೀತಿಯನ್ನು ಅನುಭವಿಸಿ ಸುತ್ತಲೂ ಹರಡುವುದು.
3. ಎಲ್ಲರಲ್ಲಿಯೂ ಮತ್ತು ಎಲ್ಲದರಲ್ಲಿಯೂ ಇರುವ ಚೈತನ್ಯವನ್ನು ಅನುಭವಿಸುವುದು.
4. ದಿನ ನಿತ್ಯದ ಚಟುವಟಿಕೆಗಳನ್ನು ಮೊದಲು ಮನಸ್ಸಿನಲ್ಲಿ ನೆನೆದು, ಅನಂತರ ಪಿಸುಮಾತಿನಲ್ಲಿ ಹೇಳಿ ಅನಂತರ ಕಾರ್ಯಗತ ಮಾಡುವುದು.
5. ಯಾವುದೇ ಗುರಿಯನ್ನು ಸಾಧಿಸುವ ಮೊದಲು, ಅದರ ಬಗ್ಗೆ ಹೆಚ್ಚು ಮಾತನಾಡದೆ ಗುಟ್ಟಾಗಿಡುವುದು.
6. ಧ್ಯಾನದಿಂದ ದೇಹ, ಮನಸ್ಸು ಮತ್ತು ಬುದ್ಧಿಗಳ ಶಕ್ತಿಗಳನ್ನು ಒಟ್ಟುಮಾಡಿ ಅರಿಷಡ್‌ವರ್ಗವನ್ನು ಗೆಲ್ಲುವುದು.
7. ನಮಗೆ ಬೇಕಾದ ಲೌಕಿಕ ಅಗತ್ಯಗಳ ಬಗ್ಗೆ ನಾವೇ ನಮ್ಮ ತೃಪ್ತಿಯ ರೇಖೆಗಳನ್ನು ಹಾಕಿಕೊಂಡು, ಆಧ್ಯಾತ್ಮಿಕ ಸಾಧನೆಯ ಬಗ್ಗೆ ಗಮನಕೊಡಬೇಕು.

## ಗುರೂಜಿಯವರ ನುಡಿಗಳು

(ಗುರೂಜಿಯವರ ಭಾನುವಾರದ ಉಪನ್ಯಾಸಗಳ ಸಂಗ್ರಹ)

(ಸಂಗ್ರಹ: ಶೋಭಾ ಕೆ. ರಾವ್; ಅನುವಾದ: ಶಿವಪ್ರಕಾಶ್ ಎಲ್)

**04–04–2010**

ಒಬ್ಬ ಮಹಿಳೆ ತಪೋನಗರಕ್ಕೆ ಬರಲು ಟ್ಯಾಕ್ಸಿಯೊಂದನ್ನು ಬಾಡಿಗೆಗೆ ಪಡೆದರು. ಟ್ಯಾಕ್ಸಿ ಚಾಲಕನು ಮೋಸ ಮಾಡುತ್ತಿರುವನೆಂದು ಅರಿವಾದಾಗ ಆಕೆ ಅವನು ಕೇಳಿದುದಕ್ಕಿಂತ ಸ್ವಲ್ಪ ಕಡಿಮೆ ಹಣ ಕೊಟ್ಟರು. ಸ್ವಲ್ಪ ಸಮಯದ ನಂತರ ಆ ಚಾಲಕನು ಹಿಂದಿರುಗಿ ಬಂದು ಹೆಚ್ಚಿಗೆ ಪಡೆದ ಹಣವನ್ನು ಹಿಂತಿರುಗಿಸಿದ! ಅವನು ತನ್ನ ಆತ್ಮಸಾಕ್ಷಿಗೆ ಸ್ಪಂದಿಸಿದ. ಇದು ಪ್ರತಿಯೊಬ್ಬರೂ ಅಂತರಂಗದಿಂದ ಒಳ್ಳೆಯವರೆಂಬುದನ್ನು ತೋರಿಸುತ್ತದೆ.

ಕೆಲವು ಸಲ ಬುದ್ಧಿಯ ವಿವೇಕ, ಸನ್ನಿವೇಶಗಳನ್ನು ನಿರ್ವಹಿಸಲು ಅಥವಾ ನಿರ್ಣಯ ಕೈಗೊಳ್ಳಲು ಸಾಕಾಗುವುದಿಲ್ಲ. ಏಕೆಂದರೆ ಅದು ಪೂರ್ಣ ವಿವೇಕವಲ್ಲ. ಹೆಚ್ಚಿನ ವಿವೇಕ ಬೇಕೆನಿಸಿದರೆ ಆತ್ಮವನ್ನು ಸಂಪರ್ಕಿಸಬೇಕು. ಆಗ ಲೌಕಿಕ ಮತ್ತು ಆಧ್ಯಾತ್ಮಿಕ ಹಂತಗಳಲ್ಲಿ ಸಂಕೀರ್ಣ ಸನ್ನಿವೇಶಗಳನ್ನು ನಿರ್ವಹಿಸಿ, ಜೀವನ ನಡೆಸಿಕೊಂಡು ಹೋಗಲು ನಿಮಗೆ ಸಾಧ್ಯವಾಗುತ್ತದೆ.

ಮನಸ್ಸಿಗೆ ನೋವಾದಾಗ, ಮೋಸ ಹೋದಾಗ ಅಥವಾ ಅನ್ಯಾಯವಾದಾಗ ಶಾಂತವಾಗಿರಲು ಬಹಳ ಕಷ್ಟವಾಗುತ್ತದೆ ಎಂದು ಒಬ್ಬ ವ್ಯಕ್ತಿ ಪತ್ರ ಬರೆದರು. ನೀವು ಮಾನವ ಮಟ್ಟದಿಂದ ಸ್ವಲ್ಪ ಮೇಲೇರಿದರೆ, ಈ ಪ್ರಪಂಚದಲ್ಲಿರುವ ಅಪರಿಪೂರ್ಣತೆಯನ್ನು ಒಪ್ಪಿಕೊಳ್ಳಲು ಸಾಧ್ಯವಾಗುತ್ತದೆ. ನಿಮ್ಮಲ್ಲಿರುವ ಕಹಿ ಭಾವನೆಯನ್ನು ಪಕ್ಕಕ್ಕಿಡಿ. ಅದೊಂದು ರೀತಿಯ ಆಧ್ಯಾತ್ಮಿಕ ಕ್ಯಾನ್ಸರ್. ಪ್ರೇಮವನ್ನು ಹೊರತನ್ನಿ, ಆಗ ನಿಮಗೆ ಯಾರನ್ನಾದರೂ ಕ್ಷಮಿಸಲು ಸಾಧ್ಯವಾಗುತ್ತದೆ. ನಾವು ಕ್ಷಮಿಸದ ಹೊರತು ಆಧ್ಯಾತಿಕ ಪ್ರಗತಿ ಪಡೆಯಲು ಅಥವಾ ಶಾಂತಿಯುತ ಜೀವನ ನಡೆಸಲು ಆಗುವುದಿಲ್ಲ.

ಪ್ರಪಂಚವನ್ನು ಬದಲಾಯಿಸುವ ಮೊದಲು ನಾವು ನಮ್ಮೊಳಗೆ ಬದಲಾವಣೆ ತರಬೇಕು. ಈ ಬದಲಾವಣೆಯನ್ನು ಬೇರೆಯವರು ನೋಡಲಿ. ಇದರಿಂದ ಅವರು ಬದಲಾಗಲು ಪ್ರೇರಣೆ ಪಡೆಯುತ್ತಾರೆ.

ಪ್ರತಿಯೊಬ್ಬ ಆಧ್ಯಾತ್ಮಿಕ ಮುಖಂಡ ಜ್ಞಾನ ಮತ್ತು ವಿವೇಕಗಳನ್ನು ತಮ್ಮ ಉನ್ನತ ಆತ್ಮ ಅಥವಾ ಉನ್ನತ ವಲಯಗಳಲ್ಲಿರುವ ತಮ್ಮ ಮಹಾಗುರುಗಳಿಂದ ಪಡೆಯುತ್ತಾರೆ. ಉನ್ನತ ಆತ್ಮ ಅಥವಾ ಮಹಾಗುರುಗಳನ್ನು ಹೊಂದಿಲ್ಲದವರು ಬೇರೆಯವರಿಗೆ ಸರಿಯಾದ ರೀತಿಯಲ್ಲಿ ಮಾರ್ಗದರ್ಶನ ಮಾಡಲಾರರು. ಕೆಲವು ಜನರು ಇತರರನ್ನು ಪ್ರಾಮಾಣಿಕವಾಗಿ ಮಾರ್ಗದರ್ಶಿಸುತ್ತಾರೆ, ಆದರೆ ಮೇಲಿನಿಂದ ಮಾರ್ಗದರ್ಶನ ಪಡೆಯುತ್ತಿರುವುದು ಅವರಿಗೆ ತಿಳಿದಿರುವುದಿಲ್ಲ. ಇನ್ನು ಕೆಲವರು ತಮ್ಮ ಅಹಂಕಾರದ ಮಟ್ಟಗಳಿಂದ ಜನರಿಗೆ ಮಾರ್ಗದರ್ಶನ ಮಾಡುತ್ತಾರೆ. ಇಂಥವರ ವಿಷಯದಲ್ಲಿ ಸಮಸ್ಯೆಗಳು ಉದ್ಭವಿಸುತ್ತವೆ.

ಒಬ್ಬ ವಿದ್ಯಾರ್ಥಿ ಫೋಟಾನ್ ಬೆಲ್ಟ್, 2012 ಇತ್ಯಾದಿ ವಿಷಯಗಳ ಬಗ್ಗೆ ನಾವು ಬರೆದಿರುವುದು ಹೆಚ್ಚು ಜನರನ್ನು ಆಕರ್ಷಿಸಲು ಎಂದು ಟೀಕೆ ಮಾಡಿದನು. ಜನರು ಈ ದೃಷ್ಟಿಕೋನದಿಂದ ನೋಡುತ್ತಾರೆಂಬುದು ಅತ್ಯಂತ ವಿಷಾದಕರ. ಅವರ ಅಭಿಪ್ರಾಯ ತಪ್ಪು ಎಂದು ನಾನು ಅವರಿಗೆ ಸ್ಪಷ್ಟಪಡಿಸಿದೆ.

ಕೆಲವರು ಜ್ಞಾನವಾಹಿನಿಗಳಿದ್ದಾರೆ. ಇವರಿಗೆ ಮತ್ತು ಜ್ಞಾನವಾಹಿನಿ ಆಗಬಯಸುವವರಿಗೆ ನಾವು ಮಾರ್ಗದರ್ಶನ ನೀಡಿ ತರಬೇತಿ ಕೊಡುತ್ತೇವೆ. ಋಷಿಗಳು ಸೂಚನೆಗಳನ್ನು ನೀಡುವಾಗ ಎಲ್ಲ ವಾಹಿನಿಗಳು ಒಂದೇ ರೀತಿಯ ಸೂಚನೆಗಳನ್ನು ಪಡೆಯಬೇಕು, ಇಲ್ಲವಾದರೆ ನಮ್ಮನ್ನು ನಾವು ತಿದ್ದಿಕೊಳ್ಳಬೇಕು. ಸಾಮಾನ್ಯ ವಿಷಯಗಳ ಬಗ್ಗೆ ಮಾಹಿತಿ ಪಡೆಯಲು ಈ ವಾಹಿನಿಗಳನ್ನು ಉಪಯೋಗಿಸಿಕೊಳ್ಳಬಾರದು.

**11–04–2010**

ಒಬ್ಬ ವ್ಯಕ್ತಿ ಭವಿಷ್ಯದ ನಾಶಕ್ಕೆ ಸಂಬಂಧಿಸಿದ ದರ್ಶನಗಳನ್ನು ಪಡೆದರು. ನಮ್ಮಲ್ಲಿ ಯಾರಾದರೂ ಇಂತಹ ಸ್ಥಿತಿಗೆ ತಲುಪಿ ಭವಿಷ್ಯದ ಬಗ್ಗೆ ಒಂದು ಇಣುಕು ನೋಟವನ್ನು ಪಡೆಯಬಹುದು ಎಂಬುದನ್ನು ನಾನು ತಿಳಿದುಕೊಂಡೆ. ಅನೇಕ ಜನರಿಗೆ, ಬಹುಮಟ್ಟಿಗೆ ವಿನಾಶದ ಬಗ್ಗೆ ದರ್ಶನಗಳಾಗಿವೆ. ಅದು ಮುಖ್ಯವಾಗಿ ನಮ್ಮನ್ನು ಅವಲಂಬಿಸಿದೆ. ನಾವು ಧ್ಯಾನಿಗಳು, 2012ರಲ್ಲಿ ಪ್ರಮುಖ ಪಾತ್ರಧಾರಿಗಳು.

ನನ್ನ ಗುರು "ಚಂದ್ರನ ಮೇಲೆ ಪಿತೃದೇವತೆಗಳು ವಾಸಿಸುತ್ತಿದ್ದಾರೆ" ಎಂದು ಹೇಳಿದ್ದರು. ಅವರು ಬೇರೆ ಶರೀರಗಳಲ್ಲಿ, ಬೇರೆ ಮಟ್ಟದಲ್ಲಿ, ಸೂಕ್ಷ್ಮ ಮಟ್ಟದಲ್ಲಿ ಜೀವಿಸುತ್ತಾರೆ. ಭೌತಿಕವಾಗಿ ನಾವು ಅವರನ್ನು ಭೇಟಿ ಮಾಡಲು ಅಥವಾ ನೋಡಲು ಸಾಧ್ಯವಿಲ್ಲ. ಪಿತೃಲೋಕ ಬ್ರಹ್ಮಲೋಕದ ಹತ್ತಿರ ಇದೆ. ಈ ಸೂರ್ಯಮಂಡಲ ಮತ್ತು ಭೂಮಿಗೆ ಸಂಬಂಧಿಸಿದಂತೆ ಚಂದ್ರನ ಮೇಲೆ ಒಂದು ಶಾಖಾ ಕಛೇರಿಯಿದೆ. ಪ್ರತಿ ಸೂರ್ಯಮಂಡಲವು ಇಂತಹ ಶಾಖೆಯನ್ನು ಹೊಂದಿದೆ.

ಹೀಗೆ ನಾವು ಅಂಶ–ಅಂಶವಾಗಿ ಜ್ಞಾನವನ್ನು ಸಂಗ್ರಹಿಸುತ್ತೇವೆ. ಇಂತಹ ಜ್ಞಾನ ಬಂದಾಗ ಶಾಂತಿಯಿಂದ ವಿಶ್ಲೇಷಿಸಬೇಕು, ಅರ್ಥ ಮಾಡಿಕೊಳ್ಳಬೇಕು ಮತ್ತು ಅನಗತ್ಯ ವಿಷಯಗಳನ್ನು ವರ್ಜಿಸಬೇಕು. ಅದು ಹೆಚ್ಚು ಸಮಯ ತೆಗೆದುಕೊಳ್ಳುತ್ತದೆ.

ಪ್ರತಿಯೊಂದು ಮಂತ್ರಕ್ಕೆ ಒಂದು ಉದ್ದೇಶವಿದೆ. ಒಬ್ಬ ವ್ಯಕ್ತಿ ಪುಸ್ತಕದಿಂದ ಒಂದು ಮಂತ್ರವನ್ನು ತೆಗೆದುಕೊಂಡು ಪುನರುಚ್ಚರಿಸಲು ಪ್ರಾರಂಭಿಸಿದರು. ಆ ಮಂತ್ರ ಸ್ನೇಹಪರವಲ್ಲದ ಜೀವಿಗಳನ್ನು ಆಕರ್ಷಣೆ ಮಾಡಲು ಮೀಸಲಾಗಿತ್ತು. ಇಂಥ ಒಂದು ಜೀವಿ ಅವರ ಬಳಿಗೆ ಬರಲಾರಂಭಿಸಿತು ಮತ್ತು ಅವರಿಗೆ ಅದರಿಂದ ತಪ್ಪಿಸಿಕೊಳ್ಳಲಾಗಲಿಲ್ಲ. ಆದ್ದರಿಂದ ನಾವು ಅತ್ಯಂತ ಜಾಗರೂಕರಾಗಿರಬೇಕು.

ಡೈರಿ ಬರೆಯಲು ಪ್ರಾರಂಭಿಸಿ. ನಿಮಗೆ ಆಗುವ ಅನುಭವಗಳನ್ನು ಬರೆದಿಡಿ. ಕೆಲವು ಸಮಯದ ನಂತರ ಬಹುಶಃ ಒಂದು ವರ್ಷ ಅಥವಾ ಅನೇಕ ವರ್ಷಗಳ ನಂತರ ಈ ಅನುಭವಗಳ ಹಿಂದಿರುವ ಕೆಲವು ವಿಷಯಗಳನ್ನು ಗುರುತಿಸಬಹುದು. ಆಗ ಹೊಸ ಪ್ರಪಂಚಗಳು, ಹೊಸ ಬಾಗಿಲುಗಳು ತೆರೆಯುತ್ತವೆ. ನಿಮಗೆ ಯಾವುದಾದರೊಂದು ಅನುಭವ ಬಹಳ ಮುಖ್ಯವೆನಿಸಿದರೆ ನನಗೆ ಬರೆಯಿರಿ.

ಒಬ್ಬ ವ್ಯಕ್ತಿ ಧ್ಯಾನದ ಪ್ರಾಥಮಿಕ ಮಟ್ಟದ ಅಭ್ಯಾಸ ಮಾಡತೊಡಗಿದರು. ಅವರು ಇದನ್ನು ಪ್ರತಿದಿನ 7 ಘಂಟೆಗಳ ಕಾಲ ಅಭ್ಯಾಸ ಮಾಡಿದರು. ಇಂಥ ಸಾಹಸದ ಕಾರ್ಯ ಕೈಗೊಳ್ಳುವ ಮೊದಲು ನಮ್ಮನ್ನು ಸಂಪರ್ಕಿಸಬೇಕು. ಉತ್ಸಾಹವೊಂದೇ ಸಾಲದು, ಸಾಮಾನ್ಯ ಜ್ಞಾನವೂ ಅಗತ್ಯವಾಗಿ ಬೇಕು. ಈ ವ್ಯಕ್ತಿ ಅನೇಕ ಸಮಸ್ಯೆಗಳನ್ನು ಹೊಂದಿದ್ದಾರೆ. ನಿಮ್ಮನ್ನು ನೀವು ಇಂತಹ ಬುದ್ಧಿವಂತಿಕೆಯಲ್ಲದ ಕೆಲಸಗಳಿಂದ ರಕ್ಷಿಸಿಕೊಳ್ಳಿ, ಬೇಸರ ಪಡದೆ ಜಾಗರೂಕರಾಗಿರಿ.

**18–04–2010**

14ರಂದು ಸಾಯಂಕಾಲ ತಪೋನಗರದಲ್ಲಿ ಭಾರಿ ಮಳೆಯಾಯಿತು. ಆಮೇಲೆ ನಾನು ಧ್ಯಾನ ಮಾಡಿದೆ. ಧ್ಯಾನ ಅತ್ಯಂತ ಗಾಢವಾಗಿತ್ತು ಮತ್ತು ಭವ್ಯವಾಗಿತ್ತು. ಉತ್ತಮ ಧ್ಯಾನವನ್ನು ಭಾರಿ ಮಳೆಯೊಂದಿಗೆ ಹೋಲಿಸುವುದು ಸರಿಯಲ್ಲ, ಆದರೆ ಬಿರುಗಾಳಿಯಿಂದ ಕೂಡಿದ ಮಳೆಯ ನಂತರ ಪ್ರಕೃತಿಯಲ್ಲಿ ತುಂಬಿತುಳುಕುತ್ತಿದ್ದ ನಿಶ್ಚಲತೆ ನಾನು ಗಾಢವಾಗಿ ಧ್ಯಾನ ಮಾಡಲು ಸಹಾಯಮಾಡಿತು. ಇದರ ಬಗ್ಗೆ ಆಲೋಚಿಸಿದಾಗ, ನಮ್ಮ ಜೀವನದಲ್ಲಿ ಅನೇಕ ಚಂಡಮಾರುತಗಳು ಬರುತ್ತವೆ. ಅಂಥ ಪ್ರತಿಯೊಂದು ಚಂಡಮಾರುತದ ನಂತರ ಶಾಂತಿ ನೆಲೆಸುತ್ತದೆ. ಅಂಥ ಸಮಾಧಾನ–ನಿಶ್ಚಲತೆ ನಿರಂತರವಾಗಿ ಪ್ರಕೃತಿಯಲ್ಲಿ ಸಂಭವಿಸುತ್ತಿರುತ್ತದೆ. ಅದರ ಪ್ರಯೋಜನವನ್ನು ಪಡೆಯಬೇಕು.

ಬದಲಾಗುತ್ತಿರುವ ಕಾಲ ಮತ್ತು ಹೊಸ ಚೈತನ್ಯಗಳ ಕಾರಣದಿಂದ ಇಡೀ ಬೆಂಗಳೂರು ನಗರ ಹೊಸ ಕಂಪನಗಳಿಂದ ತುಂಬಿದೆ. 70000ಕ್ಕಿಂತಲೂ ಹೆಚ್ಚು ಮಕ್ಕಳು ಬೆಳಕನ್ನು ಚಾನಲ್ ಮಾಡಿ ಬೆಂಗಳೂರಿನ ಕಂಪನದ

## ಗುರೂಜಿಯವರ ನುಡಿಗಳು

(ಗುರೂಜಿಯವರ ಭಾನುವಾರದ ಉಪನ್ಯಾಸಗಳ ಸಂಗ್ರಹ)

(ಸಂಗ್ರಹ: ಶೋಭಾ ಕೆ. ರಾವ್; ಅನುವಾದ: ಶಿವಪ್ರಕಾಶ್ ಎಲ್)

ಗುಣಮಟ್ಟ ಬದಲಾಗಲು ಕಾರಣಕರ್ತರಾದರು.

ನೀವು ಒಬ್ಬ ವ್ಯಕ್ತಿಗೆ ಬೆಳಕನ್ನು ಕಳುಹಿಸಿದರೆ ಅದು ಹೀಲಿಂಗ್ ಆಗುತ್ತದೆ, ಚಾನಲಿಂಗ್ ಆಗುವುದಿಲ್ಲ.

ಇಡೀ ಪ್ರಪಂಚಕ್ಕೆ ಬೆಳಕನ್ನು ಕಳುಹಿಸುವುದು ಚಾನಲಿಂಗ್ ಆಗುತ್ತದೆ.

ನಾವು ಮುಕ್ತಿಯನ್ನು ಬದಿಗಿಟ್ಟು ಇತರರಿಗೆ ಸಹಾಯ ಮಾಡಲು ನಮ್ಮದೇ ಆದ ರೀತಿಯಲ್ಲಿ ಸೇವೆಯ ಕೆಲಸಗಳನ್ನು ಕೈಗೊಳ್ಳಬಹುದು. ಮುಕ್ತಿಯನ್ನು ಗುರಿಯಾಗಿಟ್ಟುಕೊಂಡವರು ಹೆಚ್ಚಿನ ಸೇವಾ ಕಾರ್ಯಗಳನ್ನು ಮಾಡಲು ಆಗುವುದಿಲ್ಲ. ಇದು ನಿಮ್ಮ ವೈಯಕ್ತಿಕ ಆಯ್ಕೆ. ಈ ಎರಡೂ ಆಯ್ಕೆಗಳು ತಪ್ಪಲ್ಲ.

ಧ್ಯಾನಗಳು ವೈಯಕ್ತಿಕ ಆಧ್ಯಾತ್ಮಿಕ ಬೆಳವಣಿಗೆಗಾಗಿ ಮಾತ್ರವೇ ಹೊರತು ಬೇರೆಯವರನ್ನು ಪರಿವರ್ತನೆ ಮಾಡುವುದಕ್ಕಾಗಿ ಅಲ್ಲ. ಆದರೆ ನಾವು ಧ್ಯಾನಕ್ಕೆ ತೊಡಗಿದಾಗ, ನಮ್ಮಿಂದ ಹೊರಹೊಮ್ಮುವ ಸಕಾರಾತ್ಮಕ ಕಂಪನಗಳು ಬೇರೆಯವರ ಮೇಲೆ ಪ್ರಭಾವವನ್ನು ಉಂಟುಮಾಡುತ್ತವೆ. ಅದು ಸಮಯ ತೆಗೆದುಕೊಳ್ಳಬಹುದು. ಬೇರೆಯವರಲ್ಲಿ ಬದಲಾವಣೆಗಳನ್ನು ತರಬೇಕಾದರೆ ನಾವು ಚಾನಲಿಂಗ್ ರೀತಿಯ ಕಾರ್ಯಗಳನ್ನು ತೆಗೆದುಕೊಳ್ಳಬಹುದು. ಅವರಿಗೆ ಬೆಳಕನ್ನು ಕಳುಹಿಸಿ ಮತ್ತು ನಿರೀಕ್ಷಿಸಿ.

ನಾವು ಅ–ಪ್ರೇಮವನ್ನು ತಿರಸ್ಕರಿಸಬೇಕು ಮತ್ತು ಕ್ಷಮಿಸಬೇಕು. ನಿರಂತರವಾಗಿ ತಪ್ಪುಗಳು ತಲೆದೋರಿದರೆ ನಾವು ಕ್ಷಮಿಸಲಾಗುವುದಿಲ್ಲ. ಸೃಷ್ಟಿಯಲ್ಲಿರುವ ಸಾದೃಶ್ಯ ಸತ್ಯಗಳ ಬಗ್ಗೆ ನಾವು ಅರಿಯಬೇಕು. ಅವು ಪರಸ್ಪರ ವಿರುದ್ಧವಲ್ಲ. ನಾವು ಯಾವಾಗಲೂ ನಮ್ಮ ವಿವೇಚನಾಶಕ್ತಿಯನ್ನು ಉಪಯೋಗಿಸಬೇಕು. ಹೊಸ ಚೈತನ್ಯಗಳು ಬಹಳ ಕಟ್ಟುನಿಟ್ಟಿನವು. ಒಬ್ಬ ವ್ಯಕ್ತಿ ಪಶ್ಚಾತ್ತಾಪ ಹೊಂದಿಲ್ಲದೆ ಮತ್ತು ಅದೇ ತಪ್ಪನ್ನು ಮುಂದುವರಿಸುತ್ತಿದ್ದರೆ ಈ ಚೈತನ್ಯಗಳು ಕ್ಷಮಿಸುವುದಿಲ್ಲ.

ಪ್ರತಿಯೊಬ್ಬರೂ ಜ್ಞಾನವಾಹಿನಿಗಳಾಗಲು ಬಯಸುತ್ತಾರೆ. ಅದಕ್ಕಾಗಿ ಅವರು ಶ್ರಮಿಸಬೇಕು. ಅವರು ನನ್ನ ಹತ್ತಿರ ಇರಬೇಕು. ಇಲ್ಲಿಯೇ ವಾಸಿಸಬೇಕೆಂದೇನೂ ಇಲ್ಲ, ನಾವು ಮುಕ್ತವಾಗಿ ಪರಸ್ಪರ ಸ್ಪಂದಿಸಬೇಕು. ಅವರ ಪ್ರಗತಿಯನ್ನು, ಬದಲಾವಣೆಗಳನ್ನು ನಾನು ನೋಡುವಂತಿರಬೇಕು. ಅದು ಬಹಳ ಮುಖ್ಯ.

ಮುಂಬರುವ ದಿನಗಳಲ್ಲಿ ನಾವು ಬೆಳಕಿನ ಯುಗವನ್ನು ಪ್ರವೇಶಿಸಬೇಕಾಗಿರುವಾಗ, ಜನರು ಆಧ್ಯಾತ್ಮಿಕರಾಗಬೇಕು. ಸರಳತೆ, ಒಳ್ಳೆಯತನ ಮತ್ತು ಸಭ್ಯತೆಯಿಂದ ಕೂಡಿರಬೇಕು.

ನಾವು ಪ್ರೀತಿಯನ್ನು ಹೊಂದಿದ್ದರೆ ಮತ್ತು ಅದನ್ನು ವ್ಯಕ್ತಪಡಿಸಿದರೆ, ಉಕ್ಕುವ ಜ್ವಾಲಾಮುಖಿ ಮತ್ತು ಭೂಕಂಪಗಳನ್ನು ತಡೆಗಟ್ಟಬಹುದು. ಇವು 2012ರಲ್ಲಿ ಏನಾಗಬಹುದೆಂಬುದರ ಸೂಚನೆಯಾಗಿವೆ.

**25–04–2010**

ಈಚೆಗೆ ತಪೋನಗರದಲ್ಲಿ ಭಾರೀ ಮಳೆ ಮತ್ತು ಬಲವಾದ ಗಾಳಿ ಉಂಟಾಯಿತು. ನಮ್ಮ ದೂರಸಂಪರ್ಕದ ಗೋಪುರಕ್ಕೆ ಸಿಡಿಲು ಹೊಡೆದು ತೀವ್ರ ಹಾನಿ ಉಂಟಾಯಿತು. ಓರಿಯಂಟೇಶನ್ ಸೆಷನ್ ವೆಬ್‌ಕಾಸ್ಟ್ ಮಾಡಲಾಗಲಿಲ್ಲ, ಆದರೆ ಆಡಿಯೋ ಭಾಗ ಕೆಲಸಮಾಡುವಂತೆ ಮಾಡಲಾಯಿತು. ಅದಕ್ಕಾಗಿ ಶ್ರಮಿಸಿದ ವಾಲಂಟಿಯರ್‌ಗಳಿಗೆ ಧನ್ಯವಾದಗಳು.

ಅಮರರು, "ಪ್ರಳಯ ಉಂಟಾದಾಗ ಅದು ಎಲ್ಲರನ್ನೂ ಗುರಿ ಮಾಡುತ್ತದೆ" ಎಂದು ನಮಗೆ ಹೇಳಿದ್ದರು. ನಾವು ಧ್ಯಾನ ಮಾಡಿದಾಗ ತನ್ನಷ್ಟಕ್ಕೆ ತಾನೇ ನಮಗೆ ರಕ್ಷಣೆ ಸಿಗುವುದಿಲ್ಲ. ಆದರೆ ನಮ್ಮ ಪ್ರಯತ್ನಗಳು ಮತ್ತು ಕ್ರಿಯೆಗಳಿಂದ ನಮ್ಮನ್ನು ನಾವು ರಕ್ಷಿಸಿಕೊಳ್ಳಬಹುದು. ಆಧ್ಯಾತ್ಮಿಕತೆಯ ಅಡಿ ನಾವು ಆಶ್ರಯವನ್ನು ಪಡೆಯಬೇಕೆಂದು ಅವರು ಹೇಳಿದ್ದಾರೆ. ಅದು ನಮ್ಮನ್ನು ರಕ್ಷಿಸುತ್ತದೆ ಮತ್ತು ಉಳಿಸುತ್ತದೆ.

ನೀವು ಸಮಾಧಿಯನ್ನು ಅನುಭವಿಸಬೇಕಾದರೆ ಮಂತ್ರವಿಲ್ಲದೆ ಧ್ಯಾನ ಮಾಡಲು ಪ್ರಯತ್ನಿಸಬೇಕು.

ಬೆಳಕನ್ನು ಅನುಭವಿಸಲು ಪ್ರಾರಂಭಿಸಿ, ಅದು ಅತ್ಯದ್ಭುತ ಸುಂದರ ಅನುಭವ.

ಬದಲಾವಣೆಯ ಪ್ರಕ್ರಿಯೆ ವೈಯಕ್ತಿಕ, ಸಾಮಾಜಿಕ ಮತ್ತು ಪ್ರಾಪಂಚಿಕ ಹಂತಗಳಲ್ಲಿ ಪ್ರಾರಂಭವಾಗಿದೆ. ಈ ಬದಲಾವಣೆಯ ಮೊದಲ ಭಾಗದಲ್ಲಿ ಕುಂದು ಕೊರತೆಗಳು ಹಾಗೂ ಒಳ್ಳೆಯ ಅಂಶಗಳು ವ್ಯಕ್ತಿಯಲ್ಲಿ ಮತ್ತು ವ್ಯವಸ್ಥೆಗಳಲ್ಲಿ ಕಾಣಿಸಿಕೊಳ್ಳುವುದು. ನಾವು ಇದರಿಂದ ಹೊರಬರಲು, ಬದಲಾಗಲು ಪ್ರಯತ್ನಗಳನ್ನು ಮಾಡಬೇಕು. ಜನಗಳು ಬದಲಾಗಲು ಆಯ್ಕೆ ಮಾಡಿಕೊಳ್ಳದಿದ್ದರೆ, ಈ ಜನ್ಮದ ನಂತರ ಅವರನ್ನು ಬೇರೆ ಸ್ಥಳಗಳಿಗೆ ಸ್ಥಳಾಂತರಿಸಲಾಗುತ್ತದೆ. ಅಲ್ಲಿ ಆಯ್ಕೆ ಮಾಡಿಕೊಳ್ಳಲು ಮತ್ತು ಬೆಳೆಯಲು ಅವಕಾಶಗಳನ್ನು ಕಲ್ಪಿಸಲಾಗುತ್ತದೆ. ಅವರು ಬದಲಾವಣೆಗೊಂಡರೆ ಬೆಳಕು ಇರುವಂತಹ ಭೂಮಿಗಳಿಗೆ ಅವರನ್ನು ಕರೆದುಕೊಂಡು ಹೋಗಲಾಗುವುದು. ಆದರೆ ಇಲ್ಲಿಯೂ ಜನರು ಪ್ರಜ್ಞಾಪೂರ್ವಕವಾಗಿ ಬದಲಾಗಲು ತಿರಸ್ಕರಿಸಿದರೆ, ಆಗ ಅವರನ್ನು ಅತ್ಯಂತ ಕಷ್ಟಕರ ಜೀವನ ಇರುವಂತಹ ಕೆಳಗಿನ ಭೂಮಿಗಳಿಗೆ ಕಳುಹಿಸಲಾಗುವುದು. ನಾವು ಬದಲಾಗೋಣ.

ಇಂತಹ ಸಮಯದಲ್ಲಿ ನಿಮ್ಮದೇ ಸ್ವಂತ ಬೆಳಕನ್ನು, ನಿಮ್ಮ ಆತ್ಮಸಾಕ್ಷಿಯನ್ನು, ನಿಮ್ಮ ಅಂತರ್‌ಗ್ರಹಣ ಶಕ್ತಿಯನ್ನು ಅನುಸರಿಸಿ. ಇನ್ನು ಮುಂದೆ ನಾವು ಬಹುಶಃ ಸಂಪರ್ಕ ಮಾಧ್ಯಮ ಕುಸಿದುಬೀಳುವ ಕಾಲವನ್ನು ತಲುಪಬಹುದು. ಅಷ್ಟರೊಳಗೆ ಬೆಳಕಿನೊಂದಿಗೆ ಸಂಪರ್ಕವನ್ನು ಪ್ರತಿಷ್ಠಾಪಿಸಿಕೊಳ್ಳಬೇಕು. ಈಗಲೇ ಅದನ್ನು ಪಡೆಯಲು ಪ್ರಾರಂಭಿಸೋಣ. ಇದು ಧ್ಯಾನದಷ್ಟೇ ಮುಖ್ಯ.

ಋಷಿಕಾರ್ಯ ಅನೇಕ ಜನ್ಮಗಳವರೆಗೆ ವ್ಯಾಪಿಸಿದೆ. ಧ್ಯಾನಗಳನ್ನು ಹೇಳಿಕೊಡುವುದು, ಜಾಗೃತಿಯನ್ನು ಹೊಸ ವಾಸ್ತವೀಯತೆಗಳಿಗೆ ಹರಡುವುದು ಮತ್ತು ಬೆಳಕನ್ನು ಚಾನಲ್ ಮಾಡುವುದು ನಮ್ಮ ಕಾರ್ಯವಾಗಿದೆ. ನಾವು ಶೀಘ್ರವಾಗಿ ಏಕಕಾಲಕ್ಕೆ ವಿಸ್ತರಿಸಲಾಗದು ಮತ್ತು ಹಾಗೆ ಮಾಡುವುದಿಲ್ಲ. ನಮ್ಮನ್ನು ಅರ್ಥ ಮಾಡಿಕೊಳ್ಳುವುದು ಜನರಿಗೆ ಸುಲಭವಲ್ಲ.

ಒಮ್ಮೆ ನನ್ನ ತಲೆಯಲ್ಲಿ ವಿಚಿತ್ರವಾದ ನೋವು ಕಾಣಿಸಿಕೊಂಡಾಗ 3 ನಿಮಿಷಗಳ ಕಾಲ ಹೀಲಿಂಗ್ ತಂತ್ರವನ್ನು ಅಭ್ಯಾಸ ಮಾಡಬೇಕೆಂದು ತಿಳಿಸಿದರು. ಒಂದು ಘಂಟೆಯೊಳಗೆ ಆ ನೋವು ಮಾಯವಾಯಿತು. ನಾವು ಹೀಲಿಂಗ್ ಕೇಂದ್ರಗಳನ್ನು ಪ್ರಾರಂಭಿಸಬಹುದು. ಆದರೆ ಇಲ್ಲಿ ಪರಿವರ್ತನೆಗೆ ಪ್ರಾಮುಖ್ಯತೆ ನೀಡಲಾಗಿದೆ. ಪ್ರತಿಯೊಬ್ಬರೂ ಬೆಳಕನ್ನು ಕೊಂಡೊಯ್ಯುವ ನಿಜವಾದ ಬೆಳಕಿನ ಕಾರ್ಯಕರ್ತರಾಗಬೇಕು. ಭವಿಷ್ಯದಲ್ಲಿ ಜನರಿಗೆ ಮಾರ್ಗದರ್ಶನ ಮಾಡಲು ನಾವಿದ್ದೇವೆ. ಪ್ರತಿಯೊಬ್ಬರೂ ಈ ಗುರುತರ ಜವಾಬ್ದಾರಿಯನ್ನು ಹೊರಬೇಕಾಗಿದೆ.

ಕೆಲವರು ಏಪ್ರಿಲ್ 24ರಂದು ಓರಿಯಂಟೇಶನ್ ಕ್ಲಾಸ್ ಇದೆ ಎನ್ನುವುದನ್ನು ಮರೆತರು. ಅದು ಅವರ ನಿರಾಸಕ್ತಿಯನ್ನು ತೋರಿಸುತ್ತದೆ. ಓರಿಯಂಟೇಶನ್ ಕ್ಲಾಸ್‌ನಲ್ಲಿ ಕೊಡುವ ತಂತ್ರಗಳನ್ನು ಅಭ್ಯಾಸ ಮಾಡುವುದರಿಂದ ಯಾವ ತೊಂದರೆಯೂ ಇಲ್ಲ. ಅವು ಹೊಸ ಚೈತನ್ಯಗಳು, ಹೊಸ ಅನುಭವಗಳು ಮತ್ತು ಹೊಸ ಅಂತರ್‌ದೃಷ್ಟಿಗಳಿಂದ ನಮ್ಮನ್ನು ಶ್ರೀಮಂತಗೊಳಿಸುತ್ತವೆ. ವಿವೇಚನಾಪರರಾಗಿರಿ. ಇವೆಲ್ಲಾ ನಿಮಗಾಗಿ, ಧ್ಯಾನಿಗಳಿಗಾಗಿ. ಓರಿಯಂಟೇಶನ್ ಕ್ಲಾಸ್‌ನಲ್ಲಿ ಒಂದು ನಿರ್ದಿಷ್ಟ ಸಮಯದಲ್ಲಿ ಅಲ್ಲಿಯೇ ಇದ್ದ ಭಗವಾನ್ ಕಲ್ಕಿಯಿಂದ ಚೈತನ್ಯಗಳನ್ನು ನಾವು ಪಡೆಯುತ್ತೇವೆ. ನಾನು ಹೇಳುವುದನ್ನು ನೀವು ಒಪ್ಪಬೇಕಿಲ್ಲ. ನೀವು ಇಚ್ಛಾಶಕ್ತಿಯನ್ನು ಎಷ್ಟು ಬೇಕಾದರೂ ಬಳಸಬಹುದು. ನಾವು ತಪ್ಪಾದ ವಿಷಯಗಳನ್ನು ಆಯ್ಕೆ ಮಾಡಿಕೊಂಡು ಇಚ್ಛಾಶಕ್ತಿಯನ್ನು ಒಂದೇ ಸಮನೆ ಅಭ್ಯಾಸ ಮಾಡಿದರೆ ಅನೇಕ ಸಮಸ್ಯೆಗಳು ಉದ್ಭವಿಸುತ್ತವೆ. ಅದರ ವಿವೇಚನೆ ಯಾವಾಗಲೂ ನಮಗೆ ಬಿಟ್ಟಿದ್ದು. ಇಚ್ಛಾಶಕ್ತಿ ಮತ್ತು ಸ್ವಾತಂತ್ರ್ಯ ಭಗವಂತನ ಅದ್ಭುತ ಕಾಣಿಕೆಗಳು. ■

## ಹೊರಗಿನವರಿಗೆ ಧ್ಯಾನಕಲಿಕೆ

ಧ್ಯಾನದ ತರಗತಿಗಳಿಗೆ ಬರಲು ಸಾಧ್ಯವಿಲ್ಲದಿರುವವರಿಗೆ ಅಂಚೆ ಮತ್ತು ಇ–ಮೇಲ್‌ಗಳ ಮೂಲಕ ಧ್ಯಾನ ಕಲಿಸಲಾಗುವುದು. ಇಂಗ್ಲಿಷ್‌ನಲ್ಲಿ (ವರ್ಷಕ್ಕೆ ರೂ. 1000/–), ಕನ್ನಡ, ಮರಾಠಿ ಮತ್ತು ಹಿಂದಿಯಲ್ಲಿ (ವರ್ಷಕ್ಕೆ ರೂ. 700/–) ಪಾಠಗಳನ್ನು ಕಳುಹಿಸಲಾಗುವುದು.

ವಾರ್ಷಿಕ ಫೀನಲ್ಲಿ ಪಠ್ಯ ಪುಸ್ತಕಗಳು ಮತ್ತು ವಾರ್ತಾಪತ್ರಿಕೆಯ ಒಂದು ವರ್ಷದ ಚಂದಾ ಸೇರಿರುತ್ತದೆ.

- ★ ಎಲ್ಲಾ ಸೂಚನೆಗಳನ್ನು ಪೋಸ್ಟ್ ಅಥವಾ ಇ–ಮೇಲ್ ಮೂಲಕ (ಆಯ್ಕೆ ಮಾಡಿದಂತೆ) ಆಯಾ ಭಾಷೆಯಲ್ಲಿ ಕಳುಹಿಸಿಕೊಡಲಾಗುವುದು.
- ★ ಸೂಕ್ಷ್ಮ ಮಟ್ಟದಲ್ಲಿ, ಋಷಿಗಳು ದೀಕ್ಷೆಯನ್ನು ಕೊಡುತ್ತಾರೆ ಮತ್ತು ಸಾಧನೆಯ ಪ್ರಗತಿಯನ್ನು ಗಮನಿಸುತ್ತಾರೆ.
- ★ ಎಲ್ಲಾ ಪ್ರಶ್ನೆಗಳಿಗೆ ಮತ್ತು ಸಂದೇಹಗಳಿಗೆ ಗುರೂಜಿಯವರೇ ಉತ್ತರಿಸುತ್ತಾರೆ.
- ★ ನಮ್ಮ ಮಾರ್ಗ ಮತ್ತು ಸಾಧನೆಯನ್ನು ಸರಿಯಾಗಿ ಅರ್ಥಮಾಡಿಕೊಳ್ಳಲು ವಿದ್ಯಾರ್ಥಿಗಳು ನಮ್ಮ ಎಲ್ಲ ಪುಸ್ತಕಗಳನ್ನು ಓದಬೇಕು.
- ★ ಅಭ್ಯಾಸದ ವರದಿಗಳನ್ನು ಸಕಾಲಕ್ಕೆ ತಲುಪಿಸಬೇಕು. ಸಕಾಲಕ್ಕೆ ವರದಿ ಬಾರದಿದ್ದರೆ, ವಿದ್ಯಾರ್ಥಿ ಧ್ಯಾನ ಮಾಡುತ್ತಿಲ್ಲ ಎಂದು ಪರಿಗಣಿಸಲಾಗುತ್ತದೆ.

**ಚೆಕ್/ಡಿಡಿಗಳನ್ನು "ಮಾನಸ ಲೈಟ್ ಏಜ್ ಫೌಂಡೇಶನ್(ರಿ)" ಹೆಸರಲ್ಲಿ ಕಳುಹಿಸಬೇಕಾಗುತ್ತದೆ. ಬೆಂಗಳೂರೇತರ ಚೆಕ್‌ಗಳಿಗೆ 50ರೂ. ಹೆಚ್ಚಿಗೆ ಸೇರಿಸಬೇಕಾಗುತ್ತದೆ.**

### ಗುರೂಜಿಯವರಿಂದ ವಿಶೇಷ ಸೂಚನೆಗಳು

- ★ ತಾಳ್ಮೆ ಇರಲಿ. ಮೊದಲನೆಯ ದಿನವೇ ಸಮಾಧಿಯ ಅನುಭವವನ್ನು ನಿರೀಕ್ಷಿಸಬೇಡಿ. ಪವಾಡಗಳನ್ನು ನಿರೀಕ್ಷಿಸಬೇಡಿ. ನಾವು ಶ್ರದ್ಧೆಯಿಂದ ಸಾಧನೆಯನ್ನು ಮುಂದುವರಿಸಿದರೆ ಪವಾಡಗಳು ಸದ್ದಿಲ್ಲದೆ ನಡೆಯುತ್ತವೆ.
- ★ ಪ್ರತಿಯೊಬ್ಬರೂ ತಮ್ಮದೇ ರೀತಿಯಲ್ಲಿ ಸೆಣಸಾಟಗಳನ್ನೆದುರಿಸುತ್ತಾರೆ. ಆದರೆ ಸಾಧನೆ ಮುಂದುವರಿದಂತೆ ಎಲ್ಲ ಕರಗಿಹೋಗುತ್ತವೆ.
- ★ ಪ್ರತಿಯೊಬ್ಬರಿಗೂ ತಮ್ಮದೇ ಆದ ಅನುಭವಗಳಾಗುತ್ತವೆ. ಆದರೆ ಅವುಗಳ ಕಡೆ ಹೆಚ್ಚು ಗಮನ ಕೊಡಬಾರದು. ಅನುಭವಗಳು ಒಳ್ಳೆಯದು. ಆದರೆ ಅವು ಸಾಧನೆಯಲ್ಲಿ ಪ್ರಗತಿಯನ್ನು ಅಳೆಯುವುದಿಲ್ಲ.
- ★ ಧ್ಯಾನ ಮಾಡುವಾಗ, ಧ್ಯಾನದ ಕ್ರಿಯೆಗಳನ್ನು ವಿಶ್ಲೇಷಿಸಬಾರದು. ವಿಶ್ಲೇಷಣೆ ಧ್ಯಾನಕ್ಕೆ ಸಹಾಯ ಮಾಡುವುದಿಲ್ಲ.
- ★ ಧ್ಯಾನ ಮಾಡುವಾಗ, ಯೋಚನೆಗಳು ಸಾಮಾನ್ಯ. ಅದರಿಂದ ತಲೆಕೆಡಿಸಿಕೊಳ್ಳಬಾರದು. ಯೋಚನೆಗಳನ್ನು ಓಡಿಸಲು ಪ್ರಯತ್ನ ಮಾಡಬಾರದು. ಅವುಗಳನ್ನು ಗಮನಿಸದೆ ಇರುವುದು ಉತ್ತಮ. ಬೇರೆ ದಾರಿಯೇ ಇಲ್ಲ.

## ಪತ್ರಗಳು

ಸಂಗ್ರಹ: ವೈಶಾಲಿಜೋಶಿ; ಅನು: ಪಾಂಡುರಂಗ

ನಾನು ನೀವು ಮಾಡುತ್ತಿರುವ ಕೆಲಸವನ್ನು ಪ್ರೀತಿ ಮತ್ತು ಗೌರವಗಳಿಂದ ಕಾಣುತ್ತೇನೆ. ನಿಮ್ಮ ಕೆಲಸ ನಾವು ಮಾಡುತ್ತಿರುವ ಕೆಲಸಕ್ಕೆ ಹತ್ತಿರವಾಗಿದೆ. ನಾವು ನಿಮ್ಮ ಜೊತೆ ಸೇರಿ ಪ್ರಪಂಚದ ಒಳಿತಿಗಾಗಿ ಬೆಳಕನ್ನು ಹರಡುತ್ತೇವೆ. ನೀವು ಈ ಕೆಲಸವನ್ನು ವ್ಯವಸ್ಥಿತವಾಗಿ ಮುನ್ನಡೆಸುತ್ತಿರುವ ರೀತಿ ನಮಗೆ ಆಶ್ಚರ್ಯ ಉಂಟುಮಾಡಿದೆ. ನಿಮ್ಮ ತತ್ವಗಳು ಅತಿ ಸರಳ ಮತ್ತು ಸುಂದರವಾಗಿವೆ.

–ಮೆನೋರಾ ಚಾರ್ನಿ, ಇಸ್ರೇಲ್

ಕಳೆದ ಕೆಲವು ವಾರಗಳಿಂದ, ನನ್ನ ಮನಸ್ಸು ಆತಂಕದಿಂದ ತುಂಬಿತ್ತು ಮತ್ತು ನನ್ನ ಆಫೀಸಿನ ಕೆಲಸದ ಸಮಸ್ಯೆಯಿಂದಾಗಿ ಅತ್ಯಂತ ಒತ್ತಡದಿಂದಿದ್ದೆ. ನಾನು ಓರಿಯಂಟೇಶನ್ ಕಾರ್ಯಕ್ರಮದಲ್ಲಿ ಭಾಗವಹಿಸಿದ ನಂತರ ನನ್ನ ಮನಸ್ಸು ಶಾಂತವಾಯಿತು. ಸಮಸ್ಯೆಯ ಪರಿಹಾರದ ಬಗ್ಗೆ ಪರಾಮರ್ಶಿಸಲು ಸಾಧ್ಯವಾಯಿತು. ಇದೊಂದು ಅದ್ಭುತ ಅನುಭವ.

–ಕರುಣಾ ದುರ್ಬೆ

ನಾನೀಗ ಶರಣಾಗತಿಯ ಮಾರ್ಗವನ್ನು ಒಪ್ಪಿಕೊಂಡಿದ್ದೇನೆ. ದೇವರನ್ನು ನನ್ನ ಎಡೆಬಿಡದ ಸಂಗಾತಿಯನ್ನಾಗಿ ಮಾಡಿಕೊಂಡಿದ್ದೇನೆ ಮತ್ತು ಆತನಿಗೆ ನನ್ನ ದಿನವನ್ನು ಅರ್ಪಿಸುತ್ತೇನೆ. ಇದು ದಿನದಲ್ಲಿ ಏನೇ ಬಂದರೂ, ಅದು ಅವನಿಚ್ಛೆ ಎಂದು ಸ್ವೀಕರಿಸಲು ಸಹಾಯ ಮಾಡಿದೆ. ಸಂಭವಿಸುವ ಎಲ್ಲಾ ಘಟನೆಗಳಿಗೆ ಸಾಕ್ಷಿಯಾಗಿರುವುದಕ್ಕೆ ನಾನೀಗ ಪ್ರಯತ್ನಿಸುತ್ತಿದ್ದೇನೆ.

–ಗೀತಾ ಬಾಲಕೃಷ್ಣನ್

“ಇನ್‌ವಿಕ್ಟಸ್” ಸಿನಿಮಾವನ್ನು ನೋಡುತ್ತಿದ್ದಾಗ ಅದರ ಮುಖ್ಯಪಾತ್ರವನ್ನು ನಿಮಗೆ ಹೋಲಿಸಬೇಕೆನಿಸಿತು. ಏಕೆಂದರೆ ಅವನೂ ಕೂಡಾ ನಿಮ್ಮಂತೆ ಏಕತೆಗೋಸ್ಕರ ಹೋರಾಡುತ್ತಾನೆ. ನೀವು ಎಲ್ಲಾ ಸಮುಯದಲ್ಲೂ ಜನರನ್ನು ಪ್ರೀತಿಯಿಂದ ಕ್ಷಮಿಸುವಂತೆ, ಅವನೂ ಕೂಡ ಕ್ಷಮಿಸುತ್ತಾನೆ. ನಾವು ಪ್ರತಿ ಸಾರಿ ತಪ್ಪು ಮಾಡಿದಾಗಲೂ ನಮ್ಮನ್ನು ನೀವು ಕ್ಷಮಿಸಿ, ನೀವು ನಮ್ಮ ಕಷ್ಟ ಸಮಯದಲ್ಲಿ ನೀಡುವ ಸುಂದರವಾದ ಮುಗುಳ್ನಗೆಗೆ ಧನ್ಯವಾದಗಳು.

–ಅಮೋಘ್ ಜಿ.ಎಸ್.

ಇತ್ತೀಚೆಗೆ, ನನ್ನ ಸಂಬಂಧಿಯೊಬ್ಬರು ತೀರಿಕೊಂಡಾಗ ನಾನು ವಿಚಲಿತನಾಗಲಿಲ್ಲ. ಆ ಆತ್ಮದ ಜವಾಬ್ದಾರಿ ತೆಗೆದುಕೊಳ್ಳುವಂತೆ ನಾನು ನಿಮ್ಮನ್ನು ಮತ್ತು ಋಷಿಗಳನ್ನು ಪ್ರಾರ್ಥಿಸಿ, ಬೆಳಕನ್ನು ಹರಡಿದೆ. ‘ಆತ್ಮದ ಅವರೋಹಣ’ ಪುಸ್ತಕದಲ್ಲಿರುವ ವಿಷಯ ತಿಳಿಸಿ ಆಕೆಯ ಮಕ್ಕಳನ್ನು ಸಂತೈಸಿದೆ. ಈ ಎಲ್ಲಾ ಜ್ಞಾನಸಂಪತ್ತು ನಮ್ಮನ್ನು ವಿವೇಕಿಗಳನ್ನಾಗಿ ಮಾಡಿದೆ; ಮಾನಸಿಕ ದೃಢತೆ ತಂದಿದೆ; ನಮ್ಮಿಂದ ಕಾಂತಿಯನ್ನು ಹರಡುವಂತೆ ಮಾಡಿದೆ. ಇದಕ್ಕೆಲ್ಲಾ ನಾನು ಚಿರಋಣಿಯಾಗಿದ್ದೇನೆ.

–ವಿಶ್ವಾಸ್ ದೀಕ್ಷಿತ್

ವಾರಾಂತ್ಯದಲ್ಲಿ ನಮಗೆ ನಿಮ್ಮ ಧ್ವನಿಯನ್ನು ಕೇಳುವುದು ಮತ್ತು ನಿಮ್ಮ ನಗುಮುಖವನ್ನು ನೇರವಾಗಿ ನೋಡುವುದಕ್ಕಿಂತ ಬೇರೆ ಯಾವ ದೊಡ್ಡ ಸಂತೋಷ ಇಲ್ಲ. ನೀವಾಡುವ ಮಾತುಗಳಲ್ಲಿ ನಿಮಗಿರುವ ಗಾಢನಂಬಿಕೆ ನನ್ನ ಹೃದಯವನ್ನು ಭರವಸೆ, ಪ್ರೀತಿ, ಬೆಳಕು ಮತ್ತು ಶಾಂತಿಗಳಿಂದ ತುಂಬುತ್ತವೆ. ಇಂಥ ಪರಿಶುದ್ಧ ಜ್ಞಾನವನ್ನು ಪರಿಗ್ರಹಿಸದೆ ದೂರವಿಡುವವರು ನಾವೇ. ಆದರೆ ಋಷಿಗಳು, ನೀವು ಮತ್ತು ಅಮರ ಯಾವ ಷರತ್ತುಗಳಿಲ್ಲದೆ ನಮ್ಮನ್ನು ಒಪ್ಪಿಕೊಳ್ಳುತ್ತೀರಿ ಮತ್ತು ಅದೇ ಸಹಜವಾದ ಪ್ರೀತಿಯಿಂದ ಆದರಿಸುತ್ತೀರಿ.

–ಅಜಿತ್ ಕುಮಾರ್

ಬೇರೆಯವರು ಮಾಡಿದ ತಪ್ಪುಗಳನ್ನು ಸಹಿಸಿಕೊಳ್ಳಬೇಕೆಂಬ ನಿಮ್ಮ ಮಾತುಗಳು ನನ್ನ ಮೇಲೆ ಪ್ರಭಾವ ಬೀರಿದೆ ಮತ್ತು ಇದು ಬೇರೆಯವರ ಬಗ್ಗೆ ನನಗಿರುವ ಮನೋಧರ್ಮ ಬದಲಾಯಿಸಿಕೊಳ್ಳುವಲ್ಲಿ ಸಹಾಯ ಮಾಡಿದೆ. ಇತ್ತೀಚೆಗೆ, ಒಬ್ಬ ವ್ಯಕ್ತಿ ಮಾಡಿದ ತಪ್ಪಿನಿಂದಾಗಿ ನಾನು ಕಷ್ಟಪರಿಸ್ಥಿತಿಯನ್ನು ಎದುರಿಸಬೇಕಾಯಿತು. ನಾನು ಆತ ಮಾಡಿದ ತಪ್ಪನ್ನು ತಿಳಿಸಲಿಲ್ಲ ಮತ್ತು ಆ ತಪ್ಪನ್ನು ಗಣನೆಗೆ ತೆಗೆದುಕೊಳ್ಳಲಿಲ್ಲ. ಇಂಥ ಬದಲಾವಣೆಗಳು ನನ್ನಲ್ಲಿ ಬಂದಿರುವುದರಿಂದ ನನಗೆ ಸಂತೋಷವಾಗಿದೆ.

–ರಮೇಶ್ ಬಿರಾಜ್‌ದಾರ್

ನನ್ನ ವ್ಯಕ್ತಿತ್ವದಲ್ಲಿ ಅನೇಕ ಬದಲಾವಣೆಗಳು ಆಗಿವೆ ಮತ್ತು ಜೀವನದ ಗುರಿ ಸ್ಪಷ್ಟವಾಗಿ ಗೋಚರಿಸ ತೊಡಗಿದೆ. ಅನೇಕ ಅವಕಾಶಗಳನ್ನು ತಂದಿವೆ. ನಿಮ್ಮ ನಿಷ್ಕಲ್ಮಷ ಪ್ರೀತಿ ಮತ್ತು ಎಲ್ಲರ ಬಗ್ಗೆ ನಿಮಗಿರುವ ಕಾಳಜಿ ನನ್ನ ಹೃದಯವನ್ನು ತಟ್ಟಿದೆ. ಶಾಂತಿಯಿಂದ ಇರುವುದಕ್ಕೆ ಮೌನವಾಗಿರಬೇಕೆಂದು ನನಗೀಗ ಅರಿವಾಗಿದೆ.

–ಜಯಂತಿ ನಟರಾಜನ್

ನಾನು ಗೊಂದಲದ ಸನ್ನಿವೇಶಗಳಲ್ಲಿರುವಾಗ, ನಿಮಗೆ ನಾನೊಂದು ಪತ್ರ ಬರೆದೆ. ಪತ್ರ ಬರೆಯುವಾಗ, ನೀವು ಮತ್ತು ನಿಮ್ಮ ಚೈತನ್ಯಗಳು ಇರುವಂತೆ ಭಾಸವಾಯಿತು. ನಾನು ನಿಮ್ಮ ಜೊತೆ ಮಾತನಾಡುತ್ತಿರುವೆನೇನೋ ಎಂಬಂತೆ ನಾನು ಬರೆದದ್ದೆಲ್ಲಕ್ಕೂ ಸ್ಪಷ್ಟ ವಿವರಣೆ ಸಿಕ್ಕಿತು. ನಮ್ಮೆಲ್ಲರಿಗೂ ನೀವು ನೀಡಿರುವ ಆಶೀರ್ವಾದ ಮತ್ತು ಪ್ರೀತಿಗಾಗಿ, ನಾನು ನನ್ನ ಗೌರವ ಮತ್ತು ಪ್ರೀತಿಯನ್ನು ಅರ್ಪಿಸುತ್ತೇನೆ.

–ವಿದ್ಯಾ ಅರೋರಾ

## ಪ್ರಶ್ನೆಗಳು ಮತ್ತು ಉತ್ತರಗಳು

(ಸಂಗ್ರಹ: ಶೋಭಾ ಕೆ. ರಾವ್; ಅನು: ಉಷಾ ವಾಸನ್)

**ಪ್ರ: ಆಲೋಚನೆಗಳು ಚೈತನ್ಯಗಳನ್ನು ತೆಗೆದುಕೊಳ್ಳುತ್ತವೆಯೇ?**

ಉ: ಹೌದು. ಈ ದೇಹದಲ್ಲಿನ ಯಾವುದೇ ಚಟುವಟಿಕೆಗಳು ಚೈತನ್ಯಗಳನ್ನು ತೆಗೆದುಕೊಳ್ಳುತ್ತವೆ. ಭೌತಿಕ, ಮಾನಸಿಕ, ಬೌದ್ಧಿಕ – ಈ ಮೂರೂ ದೇಹಗಳಿಗೆ ಪ್ರಾಣ ಚೈತನ್ಯಗಳನ್ನು ಕೊಡುತ್ತದೆ. ಇನ್ನೂ ಹೆಚ್ಚಿನ ಚೈತನ್ಯ ಬೇಕಿದ್ದರೆ, ಮಾನಸಿಕ ಅಥವಾ ಬೌದ್ಧಿಕ ದೇಹಗಳಿಗೆ, ಅವುಗಳ ಮೂಲದಿಂದ ಪಡೆಯಬಹುದು. ಮನಸ್ಸಿನ ಮೂಲ ಬ್ರಹ್ಮಲೋಕ. ಬ್ರಹ್ಮನನ್ನು ಪ್ರಾರ್ಥಿಸಿ. ಬ್ರಹ್ಮನಿಂದ ಬೆಳಕು ಬರುತ್ತಿದೆಯೆಂದು ಮೂರರಿಂದ ಏಳು ನಿಮಿಷಗಳ ಕಾಲ ಭಾವಿಸಿ. ಹಾಗೆಯೇ ಬುದ್ಧಿಯ ಮೂಲ ದೇವಿಲೋಕ. ಮೊದಲಿನಂತೆಯೇ ನಾವು ದೇವಿ ಆದಿಶಕ್ತಿಯನ್ನು ಪ್ರಾರ್ಥಿಸಿ ಚೈತನ್ಯಗಳನ್ನು ಪಡೆಯಬಹುದು. ಅವಶ್ಯಕತೆ ಇದ್ದರೆ ನೀವು ಇದನ್ನು ಪ್ರತಿ ದಿನ ಅಭ್ಯಾಸ ಮಾಡಬಹುದು.

**ಪ್ರ: ಸಕಾರಾತ್ಮಕ ಮತ್ತು ನಕಾರತ್ಮಕ ಆಲೋಚನೆಗಳು ಹಾಗೂ ಭಾವನೆಗಳು ಒಂದೇ ತೆರನಾದ ಚೈತನ್ಯಗಳನ್ನು ತೆಗೆದುಕೊಳ್ಳುತ್ತವೆಯೇ?**

ಉ: ನಕಾರಾತ್ಮಕ ಆಲೋಚನೆಗಳು ಮತ್ತು ನಕಾರಾತ್ಮಕ ಭಾವನೆಗಳು ಹೆಚ್ಚು ಚೈತನ್ಯಗಳನ್ನು ಬರಿದು ಮಾಡುತ್ತವೆ. ಅದಕ್ಕೆ ನಾವು ಅವುಗಳನ್ನು ದೂರಮಾಡಬೇಕು

**ಪ್ರ: ಗುರುವಿಗೆ ನಮ್ಮ ಆಧ್ಯಾತ್ಮಿಕ ಬೆಳವಣಿಗೆಯ ಅರಿವಿರುವಾಗ ಅಭ್ಯಾಸ ವರದಿ ಏಕೆ ಬೇಕು?**

ಉ: ಅಭ್ಯಾಸ ವರದಿ, ನಿಮಗೆ ನಿಮ್ಮನ್ನು ವಿಮರ್ಶಿಸಲು ಒಂದು ಸದವಕಾಶ. ನೀವು ಎಷ್ಟು ದಿನ ಧ್ಯಾನ ಮಾಡಿದ್ದೀರಿ ಅಥವಾ ಮಾಡಿಲ್ಲವೆಂದು ಬರೆದಾಗ, ನಿಮಗೆ ನಿಮ್ಮ ಅಭ್ಯಾಸದ ಬಗ್ಗೆ ಅರಿವಾಗುತ್ತದೆ. ಗುರುವಿಗೆ ಬೇರೆ ಸ್ತರದಲ್ಲಿ ಇದು ತಿಳಿದಿರುತ್ತದೆ. ಈ ಸ್ತರದಲ್ಲಿ, ವಿವರಗಳ ಅವಶ್ಯಕತೆಯಿದೆ. ಸ್ವಲ್ಪ ಸಮಯವನ್ನು ಬಳಸಿ, ಅಭ್ಯಾಸ ವರದಿ ಕಳಿಸಿ.

**ಪ್ರ: ಕಳ್ಳ ಗುರುವಿನಿಂದ ನಾವು ಆಧ್ಯಾತ್ಮಿಕವಾಗಿ ಬೆಳೆಯಬಹುದೇ?**

ಉ: ಹೌದು. ಆಧ್ಯಾತ್ಮಿಕ ಬೆಳವಣಿಗೆ ನಮ್ಮನ್ನು ಅವಲಂಬಿಸಿರುತ್ತದೆ. ನಾವು ಸೂಚನೆಗಳನ್ನು ಅಥವಾ ಜ್ಞಾನವನ್ನು ಪಡೆದು ಅಭ್ಯಾಸವನ್ನು ಆರಂಬಿಸುತ್ತೇವೆ. ಇದು ನಮ್ಮ ಶ್ರದ್ಧೆ ಮತ್ತು ತೊಡಗಿಸಿಕೊಳ್ಳುವಿಕೆಯನ್ನು ಅವಲಂಬಿಸಿರುತ್ತದೆ. ನಾವು ಪ್ರಾಮಾಣಿಕ ಪ್ರಯತ್ನವನ್ನು ಮಾಡಿದರೆ ನಿಜವಾದ ಗುರು(ದೇವರು) ಮಾರ್ಗದರ್ಶನ ಮಾಡುತ್ತಾನೆ ಮತ್ತು ಎಲ್ಲಾ ಮಧ್ಯವರ್ತಿಗಳು ಕಣ್ಮರೆಯಾಗುತ್ತಾರೆ.

**ಪ್ರ: ನಮಗೆ ಅತ್ಯುತ್ತಮ ಮಾರ್ಗದರ್ಶಕ ಯಾರು?**

ಉ: ದೇವರು ನಮ್ಮ ಅತ್ಯುತ್ತಮ ಮಾರ್ಗದರ್ಶಕ. ನಿರಾಕಾರ ದೈವದ ಇರುವಿಕೆ ನಮಗೆ ತಿಳಿದಿದೆ. ಆತ ನಮಗೆ ಎಲ್ಲಾ ರೀತಿಯಲ್ಲೂ, ಎಲ್ಲಾ ಸಮಯದಲ್ಲೂ ಮಾರ್ಗದರ್ಶನ ಮಾಡುತ್ತಾನೆ, ಏಕೆಂದರೆ ನಮ್ಮ ಬಗ್ಗೆ ಆತನಿಗೆ ಸಂಪೂರ್ಣವಾಗಿ ತಿಳಿದಿದೆ. ಆತ ಎಲ್ಲಾ ಸಮಯದಲ್ಲೂ ನಮ್ಮೊಳಗೆ ಇದ್ದಾನೆ. ನಮ್ಮ ಶಕ್ತಿ–ಅಶಕ್ತಿಗಳ ಅರಿವು ಆತನಿಗಿದೆ. ನಮ್ಮ ಭೂತ–ಭವಿಷ್ಯತ್ ಮತ್ತು ಎಲ್ಲವನ್ನೂ ಆತ ತಿಳಿದಿದ್ದಾನೆ. ದೇವರ ನಂತರ ಋಷಿಗಳು. ಅವರೇ ಅತ್ಯುತ್ತಮ ಮಾರ್ಗದರ್ಶಕರು.

**ಪ್ರ: ನಮಗೆ ಧ್ಯಾನ ಮಾಡಲು ಆಗದಿದ್ದಾಗ, ನಾವು ನಮ್ಮ ಛಾಯಾಪುರುಷನಿಗೆ ಧ್ಯಾನ ಮಾಡಲು ಹೇಳಬಹುದೇ?**

ಉ: ಇಲ್ಲ. ನಾವು ಹಾಗೆ ಮಾಡಲು ಆಗುವುದಿಲ್ಲ. ನಮಗೆ ನಿಜವಾದ ಕಾರಣದಿಂದ ಧ್ಯಾನ ಮಾಡಲು ಆಗದಿದ್ದಾಗ, ನಮ್ಮ ಛಾಯಾಪುರುಷ ನಮ್ಮ ಪರವಾಗಿ ಧ್ಯಾನ ಮಾಡಲೂಬಹುದು. ಆದರೆ ಅದು ಅದರ ಸ್ವ–ಇಚ್ಛೆಯಿಂದ ಮಾಡುತ್ತದೆಯೇ ಹೊರತು ನಮ್ಮ ಇಷ್ಟದಂತಲ್ಲ.

**ಪ್ರ: ನಾವು ಋಷಿಗಳೊಂದಿಗೆ ಇದ್ದಾಗಲೂ ಏಕೆ ಆಧ್ಯಾತ್ಮಿಕವಾಗಿ ಕೆಳಗಿಳಿಯುತ್ತೇವೆ?**

ಉ: ನಮ್ಮ ಇಚ್ಛಾಸ್ವಾತಂತ್ರ್ಯದಿಂದಾಗಿ ನಾವು ಭಿನ್ನವಾಗಿರಲು ಆಯ್ಕೆಮಾಡುತ್ತೇವೆ. ನಾವು ಋಷಿಗಳನ್ನು ಸಂಪೂರ್ಣವಾಗಿ ಅನುಸರಿಸುವುದಿಲ್ಲ. ನಾವು ನಮಗೆ ಅನುಕೂಲವಾದುದನ್ನು ಅನುಸರಿಸುತ್ತೇವೆ ಮತ್ತು ಉಳಿದ ಸಮಯದಲ್ಲಿ ಋಷಿಗಳನ್ನು ಗಂಭೀರವಾಗಿ ತೆಗೆದುಕೊಳ್ಳುವುದಿಲ್ಲ. ನಮಗೆ ನಮ್ಮದೇ ಆದ ಅಹಂ ಇರುತ್ತದೆ. ಆಗ ಸ್ವಾಭಾವಿಕವಾಗಿ, ನಾವು ಋಷಿಗಳೊಂದಿಗಿದ್ದರೂ ಕೆಳಗಿಳಿಯುತ್ತೇವೆ. ಇದಕ್ಕೆ ನಾವೇ ಕಾರಣ.

**ಪ್ರ: ನಾನು ತ್ರಾಟಕ ಒಂದನ್ನೇ ಪ್ರತ್ಯೇಕವಾಗಿ ಅಭ್ಯಾಸ ಮಾಡಬಹುದೇ?**

ಉ: ತ್ರಾಟಕದೊಂದಿಗೆ ಪ್ರಾಣಾಯಾಮವನ್ನು ಅಭ್ಯಾಸ ಮಾಡಿದರೆ ಅದು ಹೆಚ್ಚು ಫಲಕಾರಿ. ತ್ರಾಟಕದೊಂದಿಗೆ ಧ್ಯಾನ ಮಾಡಿದರೆ ಅಥವಾ ಬೆಳಕನ್ನು ಚಾನಲ್ ಮಾಡಿದರೆ ಹೆಚ್ಚಿನ ಲಾಭ ದೊರೆಯುತ್ತದೆ. ಬರಿಯ ತ್ರಾಟಕದ ಅಭ್ಯಾಸವನ್ನು ನಿಷೇಧಿಸದಿದ್ದರೂ, ಶಿಫಾರಸು ಮಾಡುವುದಿಲ್ಲ. ■

## ನಮ್ಮ ಪ್ರಕಟಣೆಗಳು

| | |
|---|---|
| Doorways to Light | 200/- |
| New Age Realities | 200/- |
| Beyond 2012 | 80/- |
| 2012 - End or Beginning | 100/- |
| iGuruji - Vol 1 | 150/- |
| iGuruji - Vol 2 | 120/- |
| Living in the Light of My Guru | 220/- |
| A Package from the Rishis (containing 5 Booklets) | 250/- |
| - How to Meditate - Dhyana Yoga | |
| - Descent of Soul | |
| - Practising Shambala Principles | |
| - Astral Ventures of A Modern Rishi | |
| The Masters Answer | 120/- |
| Channelled Knowledge from the Rishis | 250/- |
| Channelled Knowledge from the Rishis Vol-2 | 150/- |
| Guruji Speaks Part - I | 200/- |
| Guruji Speaks Part - II | 200/- |
| Guruji Speaks Vol - 3 | 150/- |
| The Book of Reflections - Vol 1 | 200/- |
| The Book of Reflections - Vol 2 | 200/- |
| Meditators on Meditations | 75/- |
| Meditators on Experiences | 75/- |
| Meditational Experiences | 150/- |
| Awareness | 60/- |
| Living in Light | 10/- |
| Light | 10/- |
| ಬೆಳಕಿಗೆ ಬಾಗಿಲುಗಳು | 150/- |
| ಋಷಿಗಳಿಂದ ಬಂದ ಜ್ಞಾನ | 150/- |
| ಐ–ಗುರೂಜಿ ಭಾಗ 1 | 150/- |
| ಐ–ಗುರೂಜಿ ಭಾಗ 2 | 120/- |
| ಅನಿಸಿಕೆಗಳು | 120/- |
| 2012 ಅಂತ್ಯ ಅಥವಾ ಆರಂಭ | 100/- |
| ಋಷಿಗಳಿಂದ ಬಂದ ಕೊಡುಗೆ (ಐದು ಪುಸ್ತಕಗಳು) | 250/- |
| – ಧ್ಯಾನ ಮಾಡುವುದು ಹೇಗೆ – ಧ್ಯಾನ ಯೋಗ | |
| – ಆತ್ಮದ ಅವರೋಹಣ –ಶಂಬಲ ನಿಯಮಗಳ ಅಭ್ಯಾಸ | |
| – ಆಧುನಿಕ ಋಷಿಯೊಬ್ಬರ ಅತೀಂದ್ರಿಯ ಸಾಹಸಗಳು | |
| ಗುರೂಜಿ ನಾ ಕಂಡಂತೆ | 30/- |
| ಬೆಳಕಿನಲ್ಲಿ ಬದುಕುವುದು | 10/- |
| ಬೆಳಕು | 10/- |
| ದೈವಸಾಕ್ಷಾತ್ಕಾರಕ್ಕೆ ರಾಮಕೃಷ್ಣರ ಮಾರ್ಗದರ್ಶನ | 250/- |
| ಕಾವ್ಯಕಂಠ ವಸಿಷ್ಠ ಗಣಪತಿ ಮುನಿಗಳು | 100/- |
| ಆನೇಕಲ್ಲಿನ ಅಪರೂಪದ ವ್ಯಕ್ತಿಗಳು | 120/- |
| ऋषींकडून मिळालेले ज्ञान (Marathi) | 200/- |
| प्रकाशवाट (Marathi) | 150/- |
| २०१२ – अंत की आरंभ? (Marathi) | 100/- |
| आयगुरूजी (Marathi) | 100/- |
| ध्यान कसे करावे (Marathi) | 50/- |
| ध्यानयोग (Marathi) | 50/- |
| आत्म्याचे पृथ्वीवर अवतरण (Marathi) | 50/- |
| शंबला तत्त्वांचा अभ्यास (Marathi) | 50/- |
| एका आधुनिक ऋषीचे सूक्ष्मजगातील पराक्रम (Marathi) | 50/- |
| प्रकाशमय जीवन (Marathi) | 10/- |
| प्रकाश (Marathi) | 10/- |
| २०१२ नंतर (Marathi) | 80/- |
| ध्यान कैसे करे (Hindi) | 50/- |
| ध्यान-योग (Hindi) | 50/- |
| प्रकाश (Hindi) | 10/- |
| प्रकाशमय जीवन (Hindi) | 10/- |
| प्रकाश की ओर (Hindi) | 150/- |
| தியானம் செய்வது எப்படி | 50/- |
| ஒளியின் வாயில்கள் | 200/- |
| 2012 முடிவா அல்லது தொடகமா | 100/- |
| ஒளியில் வாழ்க்கை | 10/- |
| ஒளி | 10/- |
| தியான யோகம் | 50/- |
| ஆத்மாவின் அவரோகணம் | 50/- |
| நவீன ரிஷி ஒருவரின் சூஷ்ம சாகசங்கள் | 50/- |
| சம்பலா நியமங்களின் அப்பியாசங்கள் | 50/- |
| ధ్యానం చేయ్యడం ఎలా | 50/- |
| వెలుగులో జీవించడం | 10/- |
| కాంతి | 10/- |
| కాంతికి ద్వారములు | 150/- |

RNI. No. KARKAN/2003/13739 Registered Postal Regn. No. CPMG/KA/CNA-48/2009-11
Date of posting Newsletter-25th of Every Month. No. of Pages-8



**ಗುರೂಜಿ ಕೃಷ್ಣಾನಂದ (1939)**

### ಮಾನಸ ಫೌಂಡೇಶನ್ (ರಿ)

1988ರಲ್ಲಿ ಗುರೂಜಿ ಕೃಷ್ಣಾನಂದರಿಂದ ಸ್ಥಾಪನೆಯಾದ ಈ ಸಂಸ್ಥೆ ಜ್ಯೋತಿಕಾರ್ಯಕ್ಕೆ ಮೀಸಲಾಗಿದ್ದು, ತಪೋನಗರ ಮತ್ತು ಬೆಂಗಳೂರಿನಲ್ಲಿ ಧ್ಯಾನ ತರಗತಿಗಳನ್ನು ನಡೆಸುತ್ತದೆ.

### ಮಾನಸ

ಬೆಂಗಳೂರಿನಿಂದ ಇಪ್ಪತ್ತು ಕಿಲೋಮೀಟರ್ ದೂರದ ಚಿಕ್ಕಗುಬ್ಬಿ ಹಳ್ಳಿಯ ಬಳಿ ರೂಪುಗೊಳ್ಳುತ್ತಿರುವ ಧ್ಯಾನಾಭ್ಯಾಸಿಗಳ ಬಡಾವಣೆ. 1935ರಲ್ಲಿ ಅಮರರಿಗೆ ಇಲ್ಲಿ ಋಷಿಗಳ ಚಟುವಟಿಕೆಗಳ ಮತ್ತು ಭವಿಷ್ಯದಲ್ಲಿ ಸ್ಥಾಪನೆಯಾಗುವ ಬೆಳಕಿನ ನಗರದ ದರ್ಶನವಾಗಿತ್ತು. ವಿಶ್ವಚೇತನ ಮಂದಿರ, ಕುಂಡಲಿನಿ ಗೋಪುರ ಮತ್ತು ತಪೋವನ ಇಲ್ಲಿ ಧ್ಯಾನಮಾಡಲು ರೂಪುಗೊಂಡಿರುವ ವಿನೂತನ ಸ್ಥಳಗಳು. ತಪೋನಗರದ ಸುತ್ತಲೂ 'ಮಾನಸಿ' ಎಂಬ ವಿಭಿನ್ನ ಚೈತನ್ಯವಲಯವನ್ನು ನಿರ್ಮಿಸಿ, ಅದರಲ್ಲಿ ವಿಶೇಷ ಚೈತನ್ಯಗಳನ್ನು ಸಂಗ್ರಹಿಸಿಡಲಾಗಿದೆ.

### ಅಂತರ್ ಮಾನಸ

ಮಾನಸದ ಹುಟ್ಟು ಸ್ಥಳ. ಇದು ತಪೋನಗರದಿಂದ ಒಂದು ಕಿಲೋಮೀಟರ್ ದೂರದಲ್ಲಿರುವ ನಾಡಗೌಡ ಗೊಲ್ಲಹಳ್ಳಿಯ ಹತ್ತಿರ ಇದೆ. ಅಲ್ಲಿ ಗುರೂಜಿಯವರು 1987 ರಿಂದ 1992 ರವರೆಗೆ ವಾಸಮಾಡಿದ ಒಂದು ಗುಡಿಸಲು ಮತ್ತು ಇತರೆ ಕಟ್ಟಡಗಳಿವೆ.

### ಅಧ್ಯಯನ ಕೇಂದ್ರ

ಇದು ಆಧ್ಯಾತ್ಮಿಕ ಸತ್ಯಗಳ ಅಧ್ಯಯನಕ್ಕಾಗಿ ಅಂತರ್ಮಾನಸದಲ್ಲಿ ಋಷಿಗಳ ಮಾರ್ಗದರ್ಶನದಲ್ಲಿರುವ ಒಂದು ವಿಶೇಷವಾದ ಅಧ್ಯಯನ ಕೇಂದ್ರ.

### ಜ್ಯೋತಿ ಪ್ರಾಜೆಕ್ಟ್

ಇದು ಮುಖ್ಯವಾಗಿ ಹಳ್ಳಿಯ ಮಕ್ಕಳಿಗೆ ಮೀಸಲಾದದ್ದು. ಅವರಿಗೆ ಶಾಲೆಯ ಪಾಠಗಳಲ್ಲಿ ನೆರವಾಗುವುದಲ್ಲದೆ ಶ್ಲೋಕಗಳು, ಶುಚಿತ್ವ, ಹಾಡುಗಳು, ಸಾಮಾನ್ಯಜ್ಞಾನ ಇತ್ಯಾದಿಗಳನ್ನು ಕಲಿಸಲಾಗುತ್ತದೆ. ಅಲ್ಲದೆ ಕಥೆಗಾರಿಕೆ, ಸಂಗೀತ ಮತ್ತು ಚಿತ್ರಕಲೆಗಳ ಮೂಲಕ ಅವರಲ್ಲಿನ ಸೃಜನಶೀಲತೆಯನ್ನು ವ್ಯಕ್ತಪಡಿಸಲು ಪ್ರೋತ್ಸಾಹಿಸಲಾಗುತ್ತದೆ.

### ಲೈಟ್ ಚಾನಲಿಂಗ್

ಪ್ರತಿ ಶುಕ್ರವಾರ ಬೆಳಿಗ್ಗೆ 10 ರಿಂದ 1 ರವರೆಗೆ ಗುರೂಜಿಯವರೊಂದಿಗೆ ಧ್ಯಾನಿಗಳು ಲೈಟ್ ಚಾನೆಲಿಂಗ್ ಅನ್ನು ಮಾಡುತ್ತಾರೆ. ಯಾರಾದರೂ ಇದರಲ್ಲಿ ಭಾಗವಹಿಸಬಹುದು.

### ಸಾರ್ವಜನಿಕರು

ಎಲ್ಲ ದಿನಗಳಲ್ಲೂ ಬೆಳಿಗ್ಗೆ 10ರಿಂದ 5ರ ನಡುವೆ ಧ್ಯಾನಮಾಡಲು ಇಲ್ಲಿಗೆ ಬರಬಹುದು.

### ವಿನಂತಿ

ದಯವಿಟ್ಟು ನಮ್ಮ ಸೇವಾಕಾರ್ಯಗಳಿಗೆ ನೆರವಾಗಿ. ('ಮಾನಸ ಫೌಂಡೇಶನ್'ನ ಹೆಸರಿನಲ್ಲಿ ಚೆಕ್/ಡಿಡಿ ಪಡೆಯಬಹುದು. 80-G ನಿಯಮದಡಿ ಆದಾಯ ತೆರಿಗೆಯ ರಿಯಾಯಿತಿ ಇದೆ.)

## ಆಧ್ಯಾತ್ಮಿಕ ಅನುಭವಗಳು

**(ಸಂಗ್ರಹ: ಶೋಭಾ ಕೆ.ರಾವ್; ಅನು: ಸ್ವರ್ಣಲತ)**

ಶಸ್ತ್ರಚಿಕಿತ್ಸೆಗೆ ಒಳಗಾಗಿದ್ದ ನನ್ನ ಅತ್ತೆಯವರ ಸೇವೆಯನ್ನು ನಾನು ನಿಸ್ವಾರ್ಥಭಾವನೆಯಿಂದ ಮಾಡುತ್ತಿರಲಿಲ್ಲ. ಆಗ ವಿಶ್ವಾಮಿತ್ರ ಮಹರ್ಷಿಗಳು, ಸಂಪೂರ್ಣ ನಿಸ್ವಾರ್ಥಭಾವ ಹಾಗೂ ಪ್ರೀತಿಯಿಂದ ಆ ಸೇವೆಯನ್ನು ಮಾಡುವಂತೆ ಮತ್ತು ನನ್ನ ಕರ್ಮಗಳನ್ನು ತೀರಿಸಲು ಅದು ಸರಿಯಾದ ಸಮಯ ಎಂದು ತಿಳಿಸಿದರು. ಅನಂತರ ಅವರ ಸೇವೆಯನ್ನು ಅತ್ಯಂತ ಪ್ರೀತಿಯಿಂದ ಮಾಡಿದೆ. ಅದು ನನಗೆ ಸಂತೋಷ ತಂದಿತು. ಒಂದು ದಿನ ಅವರ ನೋವಿನ ಅನುಭವ ನನಗಾಗಿ, ನಾನು ಅಳುತ್ತಿದ್ದೆ. ನಾನು ಅದರಿಂದ ಹೊರಬಂದಾಗ ವಿಶ್ವಾಮಿತ್ರ ಮಹರ್ಷಿಗಳು ಮುಗುಳ್ನಗುತ್ತಾ, 'ಇದುವೇ ನಿಸ್ವಾರ್ಥಭಾವ' ಎಂದರು. ಋಷಿಗಳ ಪ್ರೀತಿಪೂರ್ವಕ ಮಾರ್ಗದರ್ಶನಕ್ಕೆ ನಾನು ಸದಾ ಚಿರಋಣಿಯಾಗಿದ್ದೇನೆ. –ವಿದ್ಯಾ ಅರೋರಾ

ಎರಡೂ ಕಾಲುಗಳನ್ನು ಕೈಗಳಿಂದ ಹಿಡಿದುಕೊಂಡು ಎದೆಗವುಚಿ ಕುಳಿತಿದ್ದೆ. ಆಗ ಯಾವುದೋ ಅಗೋಚರ ಶಕ್ತಿ ನನ್ನನ್ನು ಅದೇ ಸ್ಥಿತಿಯಲ್ಲಿ ಆಕಾಶದಲ್ಲಿರುವ ಒಂದು ವಿಸ್ತಾರವಾದ ಸ್ಥಳದಲ್ಲಿ ತೇಲಾಡಿಸುತ್ತಿತ್ತು. ಆ ಶಕ್ತಿ ನನಗೆ ಸುಮಾರು 500 ಅಡಿ ಎತ್ತರದಲ್ಲಿ ಒಂದು ಗುಹೆಯಿರುವ ಪರ್ವತವನ್ನು ತೋರಿಸಿತು.

ನಾನು ಹಿಂದಿನ ಜನ್ಮದಲ್ಲಿ ಆ ಸ್ಥಳಗಳಲ್ಲಿ ಮತ್ತು ಗುಹೆಯಲ್ಲಿ ಬಹಳಷ್ಟು ಸಾಧನೆಯನ್ನು ಮಾಡಿರುವುದಾಗಿ, ಗುರೂಜಿಯವರು ನಂತರ ತಿಳಿಸಿದರು. ಅಲ್ಲಿ ನನ್ನ ಹಿಂದಿನ ಸಾಧನೆಯ ಚೈತನ್ಯಗಳಿದ್ದು, ಈಗಿನ ಸಾಧನೆಗೆ ಸಹಾಯಕವಾಗುವಂತೆ ಅವನ್ನು ನೀಡುತ್ತೇವೆ ಎಂದೂ ತಿಳಿಸಿದರು. ಇದು ಒಂದು ಸೂಕ್ಷ್ಮ ಶರೀರ ಪ್ರಯಾಣದ ವಿಶೇಷಾರ್ಥವಾಗಿತ್ತು. –ರಾಕೇಶ್ ಶೆಟ್ಟಿ

ನಾನು ಫೋಟಾನ್ ಬೆಲ್ಟ್‌ನೊಡನೆ ಮಾತನಾಡಲು ಪ್ರಯತ್ನಿಸಿದೆ. ಆಗ ಮೂವರು ಸಾವು-ಬದುಕಿನೊಡನೆ ಹೋರಾಡುತ್ತಿರುವುದನ್ನು ಮತ್ತು ಹತ್ತು ಜನ ನೋವಿನಿಂದ ಚಡಪಡಿಸುತ್ತಿರುವ ಒಂದು ಚಿತ್ರವನ್ನು ನಾನು ನೋಡಿದೆ. ಆದಾಗ್ಯೂ, ಕೂಡಲೆ ಅವರೆಲ್ಲರೂ ಕಾಂತಿಯಿಂದ ತುಂಬಿ ಏನೂ ನಡೆದಿಲ್ಲವೆಂಬಂತೆ ಎದ್ದುಹೋದರು. ಆಗ ಫೋಟಾನ್ ಬೆಲ್ಟ್ 'ಇದು ನನ್ನ ಹೀಲಿಂಗ್ ಬೆಳಕು' ಎಂದು ಹೇಳಿತು. ನಂತರ ಒಂದು ಪ್ರಭಾವಶಾಲಿ ಚೈತನ್ಯ ಮತ್ತು ಒಂದು ಪ್ರಕಾಶಮಾನವಾದ ಬೆಳಕು ನನ್ನ ಮೂರನೆಯ ಕಣ್ಣಿನ ಭಾಗದಿಂದ ದೇಹದೊಳಗೆ ಪ್ರವೇಶಿಸಿ ನನ್ನ ದೇಹವನ್ನೆಲ್ಲಾ ಆವರಿಸಿತು. –ಈಕುಕೊ

ಯುಗಾದಿ ಹಬ್ಬದ ದಿನ ಧ್ಯಾನದ ನಂತರ ಋಷಿಗಳನ್ನು 'ನನ್ನ ಕರ್ಮಗಳೆಲ್ಲ ಕಳೆದಿವೆಯೇ' ಎಂದು ಕೇಳಿದಾಗ ನನ್ನ ಕೊಠಡಿಯ ಟ್ಯೂಬ್‌ಲೈಟ್ ಆಶ್ಚರ್ಯಕರ ರೀತಿಯಲ್ಲಿ ತನ್ನಷ್ಟಕ್ಕೆ ತಾನೇ ಹತ್ತಿಕೊಂಡಿತು. ಕೊಠಡಿಯೊಳಗೆ ಬೇರಾರೂ ಬಂದಿರಲಿಲ್ಲ. ನಂತರ ಗುರೂಜಿಯವರು, ಅದು ನನ್ನ ಪ್ರಶ್ನೆಗೆ ಋಷಿಗಳಿಂದ ಬಂದ ಉತ್ತರ ಎಂದು ತಿಳಿಸಿದರು. –ಪ್ರೊ. ಸಿ. ಸ್ವಾಮಿನಾಥನ್

ಆಲದ ಮರದ ಬಿಳಲು ಬೇರನ್ನು ಹಿಡಿದಾಗ ನನ್ನ ಬೆರಳುಗಳಿಂದ ಚೈತನ್ಯಗಳು ಆ ಬೇರಿಗೆ ಹರಿದು ಹೋದಂತೆ ಅನಿಸಿತು. ನಂತರ ಹೊಸದಾಗಿ ಹುಟ್ಟಿದ ಮತ್ತೊಂದು ಭಾಗವನ್ನು ಮುಟ್ಟಿದಾಗ ಚೈತನ್ಯಗಳು ಅದರಿಂದ ನನ್ನ ದೇಹದೊಳಗೆ ಹರಿದಂತಾಯಿತು. ಅದೊಂದು ಪರಸ್ಪರ ಪ್ರೀತಿಯ ವಿನಿಮಯ! ಪ್ರಕೃತಿ ನಮಗೆ ಪಾಠ ಕಲಿಸುತ್ತದೆ. ಅಂತಹ ಪ್ರಕೃತಿಯ ಮಧ್ಯೆ ನಿಶ್ಚಲವಾಗಿ ಉಳಿದು, ನನ್ನ ಆಂತರಿಕ ಶಕ್ತಿಗಳು ತೆರೆದುಕೊಳ್ಳಲು ಬಯಸುತ್ತೇನೆ.

ನಾನು ಬೆಳಕಿನ ಸಂಚಲನವನ್ನು ಅಭ್ಯಾಸ ಮಾಡುತ್ತಿದ್ದಾಗ ನನ್ನೊಳಗೆ ನೀಲಿ ಪಾರದರ್ಶಕ ಬೆಳಕು ಹತ್ತಿಉರಿದಂತಾಯಿತು. ಆ ನೀಲಿ ಬೆಳಕು ನನ್ನ ಸುತ್ತಲೂ ಹರಡಿ ಮುಂದೆ ಹೋದಂತೆಲ್ಲಾ ಪ್ರಕಾಶಮಾನವಾಗಿ ಕಂಡಿತು. –ಜಯಂತಿ ನಟರಾಜನ್

ನನ್ನ ಹೃದಯದ ಭಾಗದಲ್ಲಿ ನಾನಿರುವಂತೆ ಮತ್ತು ನನ್ನ ಸುತ್ತಲೂ ಒಂದು ಬೆಳಕಿನ ಗುಳ್ಳೆ ಇರುವಂತೆ ಅನಿಸುತ್ತದೆ. ಅಲ್ಲಿ ನಾನು ಪ್ರಜ್ಞೆಯ ಒಂದು ಬಿಂದುವಾಗಿದ್ದು, ವಿಶ್ವ ನನ್ನ ಸುತ್ತಲೂ ಹರಡುತ್ತದೆ. ಕೆಲವು ಸಲ, ಅನಂತ ನಿಶ್ಚಲತೆ ಇರುವ ಜಾಗದಲ್ಲಿ ನಾನಿರುವಂತೆ ಕಂಡೆ. –ಗೀತಾ ಬಾಲಕೃಷ್ಣ

ಧ್ಯಾನದಲ್ಲಿ ನಾನು ಹಾಸಿಗೆಯಿಂದ ಬಿದ್ದು ತಲೆಗೆ ಗಾಯವಾದಂತೆ ಅನಿಸಿತು. ಕಣ್ಣು ತೆರೆದರೆ ಏನೂ ಆಗಿರಲಿಲ್ಲ. ಅದೇ ಸಮಯದಲ್ಲಿ ನನ್ನ ಭಾವ ಬಿದ್ದು, ಅವರ ತಲೆಗೆ ಗಾಯವಾಯಿತೆಂಬ ಸುದ್ದಿ ನಂತರ ಬಂತು. ಇದರಿಂದ ನಾವೆಲ್ಲರೂ ಒಂದು ದೊಡ್ಡ ಬೆಳಕಿನ ಚಿಕ್ಕಚಿಕ್ಕ ಕಣಗಳೆಂದೂ, ಮತ್ತು ಒಬ್ಬರೊಡನೊಬ್ಬರು ಸಂಪರ್ಕ ಹೊಂದಿದ್ದೇವೆಂದೂ ಅರಿವಾಯಿತು. –ಮೀನಾ ಕುಂಬ್ಳೆ

ತಪೋವಾಣಿ, ಕನ್ನಡ ಮಾಸಪತ್ರಿಕೆ, ವಾರ್ಷಿಕ ಚಂದಾ : ರೂ.200/-
ಸಂಪಾದಕರು, ಪ್ರಕಾಶಕರು ಮತ್ತು ಮುದ್ರಕರು : ಶ್ಯಾಮಲಾ ದೇವಿ, ತಪೋನಗರ, ಚಿಕ್ಕಗುಬ್ಬಿ, (ಹೆಣ್ಣೂರು-ಬಾಗಲೂರು ರೋಡ್) ಬೆಂಗಳೂರು ಅರ್ಬನ್ - 560 077. ಮಾನಸ ಫೌಂಡೇಶನ್ (ರಿ.) ಪರವಾಗಿ.
ಮಾಲೀಕರು : ಮಾನಸ ಫೌಂಡೇಶನ್ (ರಿ.), ತಪೋನಗರ, ಚಿಕ್ಕಗುಬ್ಬಿ, (ಹೆಣ್ಣೂರು-ಬಾಗಲೂರು ರೋಡ್) ಬೆಂಗಳೂರು ಅರ್ಬನ್ - 560 077
ಪ್ರಕಾಶನ ಸ್ಥಳ ಮಾನಸ ಫೌಂಡೇಶನ್ (ರಿ.), ತಪೋನಗರ, ಚಿಕ್ಕಗುಬ್ಬಿ, (ಹೆಣ್ಣೂರು-ಬಾಗಲೂರು ರೋಡ್) ಬೆಂಗಳೂರು ಅರ್ಬನ್ - 560 077
ಮುದ್ರಣ ಸ್ಥಳ : ಆರ್ಟ್ ಪ್ರಿಂಟ್, 719/ಎ, ವೆಸ್ಟ್ ಆಫ್ ಕಾರ್ಡ್ ರೋಡ್, 2ನೇ ಸ್ಟೇಜ್, ರಾಜಾಜಿನಗರ, ಬೆಂಗಳೂರು - 560 086. ಫೋನ್ : 2335 9992
ಸಂಪಾದಕರು : ಶ್ಯಾಮಲಾ ದೇವಿ